
# ನೇಸರು

ತಿಂಗಳೋಲೆ

ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol. IX No. 2 ಫೆಬ್ರವರಿ 1991



## ವಿಕಾಸದ ಹಾದಿಯಲ್ಲಿ ಕೆಲವು ವಿಶ್ವಘಟಕಗಳು

**The Mysore Association, Bombay**

393, Bhaudaji Road, Matunga, Bombay 400 019.

Tel. : 4374647 / 4379574 Grams : "KARUNADU"

# ಮೈಸೂರು ಅಸೋಸಿಯೇಶನ್ ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ ಮಾಲೆ

- ವರದರಾಜ ಚಂದ್ರಗಿರಿ
ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ

ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಜೊತೆಗಿನ ಮೈಸೂರು ಅಸೋಸಿಯೇಶನ್ ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ ಮಾಲಿಕೆಯ ಈ ಬಾರಿಯ ಉಪನ್ಯಾಸಗಳು ಜನವರಿ 4, 5, ಮತ್ತು 6ರಂದು ಅಸೋಸಿಯೇಶನ್ ಸಭಾಗೃಹದಲ್ಲಿ ನಡೆದುವು. ಕನ್ನಡದಲ್ಲಿ ವೈಜ್ಞಾನಿಕ ಬರಹಗಳನ್ನು ನೀಡುವ ಕೆಲವೇ ಮಂದಿ ವಿದ್ವಾಂಸರಲ್ಲಿ ಪ್ರಮುಖರಾದ ಮೈಸೂರಿನ ಪ್ರೊ| ಜಿ. ಟಿ. ನಾರಾಯಣ ರಾವ್ ಅವರು ಈ ದಿನಗಳಲ್ಲಿ 'ವಿಶ್ವವಿಕಾಸ' ಮತ್ತು 'ವೈಜ್ಞಾನಿಕ ಮನೋಧರ್ಮ' ಎಂಬ ವಿಷಯಗಳ ಬಗೆಗೆ ಒಟ್ಟು ಮೂರು ಉಪನ್ಯಾಸಗಳನ್ನು ನೀಡಿದರು. ಅವುಗಳ ಸಾರಾಂಶ ಇಲ್ಲಿದೆ.



ಮುಂಬಯಿ ವಿಶ್ವವಿದ್ಯಾಲಯದ ಉಪಕುಲಗುರುಗಳಾದ ಡಾ. S. D. ಕರ್ಣಿಕ್ ಅವರು ಉಪನ್ಯಾಸಮಾಲೆಯನ್ನು ಉದ್ಘಾಟಿಸುತ್ತಿರುವುದು.

## ವಿಶ್ವವಿಕಾಸ

ಮನುಷ್ಯ ನಕ್ಷತ್ರಗಳ ಬಗ್ಗೆ ಏನು ತಿಳಿದುಕೊಂಡಿದ್ದಾನೆ - ಈ ಪ್ರಶ್ನೆಯನ್ನು ಮುಂದಿಟ್ಟು, ಆಕಾಶದ ಬಗೆಗಿನ ಜ್ಞಾನದ ಅಧ್ಯಯನದ ಚರಿತ್ರೆ ಇತ್ಯಾದಿಗಳು ಕುರಿತ ಸ್ವಾರಸ್ಯವಾದ ಉಪನ್ಯಾಸಗಳಾಗಿತ್ತು ಅದು.

ಖಗೋಳ ವಿಜ್ಞಾನ ನಮ್ಮ ಅರಿವಿನ ಕೊರತೆಗೆ ಮುಖ್ಯವಾಗಿ ಎರಡು ಕಾರಣಗಳು. ಒಂದು ಅಧ್ಯಯನದ ಪರಿಮಿತಿ ಮತ್ತು ಅದನ್ನು ಗ್ರಹಿಸುವ ನಮ್ಮ ಮಿತಿ. ಇನ್ನೊಂದು ನಮ್ಮ ಪರಂಪರೆಯ ನಂಬಿಕೆ. ಮೊದಲನೆಯದನ್ನು ಅರ್ಥೈಸಿಕೊಂಡು ಎರಡನೆಯದನ್ನು ಬಿಟ್ಟುಕೊಟ್ಟು ಈ ಕ್ಷೇತ್ರವನ್ನು ಪ್ರವೇಶಿಸುವ ಸಾಮಾನ್ಯನೊಬ್ಬನಿಗೆ ಎಲ್ಲೆಲ್ಲೂ ವಿಸ್ಮಯ, ಅಷ್ಟೇ ಕುತೂಹಲ. ಕ್ರಿ.ಶ. 2ನೇ ಶತಮಾನದ ರೋಮನ್ ಚಿಂತಕ ಸೆನೆಕನೆಂದಂತೆ ವಿಶ್ವವೆನ್ನುವುದು ಒಂದು ಅಗಾಧವಾದ ವಿಸ್ಮಯದ ಪೆಟ್ಟಿಗೆ. ಅದು ಯಾವಾತನಿಗೂ ತನ್ನ ಎಲ್ಲ ವಿಸ್ಮಯಗಳನ್ನು ಹೊರಗೆಡುಹುವುದೇ ಇಲ್ಲ. ಕಾಲದಿಂದ ಕಾಲಕ್ಕೆ ಮನುಷ್ಯ ಆ ವಿಸ್ಮಯಗಳನ್ನು ಅರಿಯಲು ಸಮರ್ಥನಾದಾಗ ಅವನ ಯೋಗ್ಯತೆಯನ್ನು ಅನುಸರಿಸಿ ಅದು ಅದನ್ನು ಹೊರಗೆಡಹುತ್ತದೆ.

ಈ ವಿಶ್ವದಲ್ಲಿ ಅಸಂಖ್ಯ ಬ್ರಹ್ಮಾಂಡಗಳಿವೆ (Galaxy) ಅಸಂಖ್ಯ ನಕ್ಷತ್ರಗಳ ಸಮುದಾಯ ಒಂದು ಬ್ರಹ್ಮಾಂಡ. ಸೂರ್ಯನೂ ಸದಸ್ಯನಾಗಿರುವ ಬ್ರಹ್ಮಾಂಡಕ್ಕೆ 'ಆಕಾಶಗಂಗೆ' ಎಂದು ಹೆಸರು. ಇದರಲ್ಲಿ 400 ಮಿಲಿಯ ನಕ್ಷತ್ರಗಳಿವೆ. ಇಂತಹ ಬ್ರಹ್ಮಾಂಡಗಳು ಪ್ರಪಂಚದಲ್ಲಿ 1000 000 000 00 ಗಳಷ್ಟಿವೆ. ಹೀಗೆ ಗಣನೆಗಳು ಮುಂದುವರಿಯುತ್ತವೆ.

ಆಕಾಶದ ಬಗೆಗಿನ ಜ್ಞಾನದ ಅಧ್ಯಯನವನ್ನು ಮೂರು ರೀತಿಯಲ್ಲಿ ವಿಂಗಡಿಸಬಹುದು. (1) ದೃಗ್ಗೋಚಾರ ಖಗೋಳ ವಿಜ್ಞಾನ ಇದಕ್ಕೆ ಮಾನವನ ಪ್ರಾಚೀನತೆಯಷ್ಟೆ ದೊಡ್ಡ ಇತಿಹಾಸವಿದೆ.(2) ರೇಡಿಯೋ ಖಗೋಳ ವಿಜ್ಞಾನ. ಇದು 1930ರಿಂದ ಆರಂಭವಾಯಿತು. (3) X - ಕಿರಣ ಖಗೋಳ ವಿಜ್ಞಾನ. ಇದು ಆಮೇಲಿನ ವೈಜ್ಞಾನಿಕ ಬೆಳವಣಿಗೆಯ ಫಲದಿಂದ ಬೆಳೆದು ಬಂತು.

ನಕ್ಷತ್ರಗಳು ಹೇಗುಂಟಾದವು? ಮನುಷ್ಯನ ಸೃಷ್ಟಿ ಹೇಗಾಯಿತು? ವಿಶ್ವವಿಕಾಸವನ್ನು ಅರಿಯುದೆಂದರೆ ಈ ಮೂಲಭೂತ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುವುದೇ ಆಗಿದೆ.

ನಕ್ಷತ್ರಗಳಿಗೂ ಚಲನೆಯಿದೆ. ಆಕಾಶವೂ ಚಲಿಸುತ್ತಿದೆ. ಆದರೆ ಅವುಗಳ ಚಲನೆಗೆ ಆಗಾಧವಾದ ದೂರವಿದೆ. ಅದರ ಅರಿವಾಗಬೇಕಾದರೆ ಸಾವಿರಾರು ವರ್ಷಗಳ ಗಣನೆ ಅಗತ್ಯ. ಸಮಾನ್ಯ ದೃಷ್ಟಿಗೆ ಅದು ಸ್ಥಿರವಾಗಿಯೇ ಗೋಚರಿಸುತ್ತದೆ. ಸೂರ್ಯನಿಗೆ ಚಲನೆಯಿದೆ. ಸೂರ್ಯನು ನವಗ್ರಹಗಳು ಕ್ಷುದ್ರಗ್ರಹಗಳು, ಧೂಮಕೇತುಗಳು ಇತ್ಯಾದಿ ತನ್ನ ಪರಿವಾರ ಸಮೇತ ಆಕಾಶ ಗಂಗೆಯ ಸುತ್ತಲೂ ಸುತ್ತುತ್ತಿರುತ್ತಾನೆ. ಅದು ಇನ್ನಾವುದರ ಸುತ್ತಲೋ ಸುತ್ತುತ್ತಾ ಇದೆ. ಇದು ಹೀಗೆ ಮುಂದುವರಿಯುವುದು. ಅದು ವಿಶ್ವದ ಗತಿಶೀಲತೆಯ ಮರ್ಮ.

ಗೋಚರ ನಕ್ಷತ್ರಗಳು ಮೂರು ತೆರನವು (1) ರಕ್ತದೈತ್ಯಗಳು (Red Giants) ಜ್ಯೇಷ್ಠ, ಆರ್ದ್ರ, ರೋಹಿಣಿ ಇತ್ಯಾದಿ. (2) ಸಾಧಾರಣ ನಕ್ಷತ್ರಗಳು (3) ಶ್ವೇತ ಕುಬ್ಜಗಳು, ಗಾತ್ರದಲ್ಲಿ ಚಿಕ್ಕಾದ, ಆದರೆ ಅತಿಶಯವಾದ ಉಷ್ಣತೆಯನ್ನು ಬೀರುವ ಶ್ವೈತಕುಬ್ಜಗಳು 1915ರ ನಂತರ ವಿಸ್ತೃತ ಪರೀಕ್ಷಣೆಗಳ ಫಲವಾಗಿ ಗೋಚರಿಸಿದವು.

ಬಲೂನು ಊದಿಕೊಂಡಾಗ ಅದರ ಚುಕ್ಕೆಗಳು ಹೇಗೆ ದೂರ ದೂರ ಸರಿಯುತ್ತವೆಯೋ ಅಂತೆಯೇ ವಿಶ್ವದಲ್ಲಿ ಎಲ್ಲವೂ ಎಲ್ಲದರಿಂದಲೂ ದೂರ ದೂರ ಸರಿಯುತ್ತಲೇ ಇರುತ್ತವೆ. ನಕ್ಷತ್ರಗಳೂ ಪರಸ್ಪರ ದೂರ ಸರಿಯುತ್ತವೆ, ಅರ್ಥಾತ್ ವಿಶ್ವ ವ್ಯಾಕೋಚಿಸುತ್ತವೆ. (Expanding Unirverse) ಇದು ಹಲವಾರು ಪ್ರತ್ಯಕ್ಷ ವೀಕ್ಷಣೆಗಳಿಂದ ರುಜುವಾತಾಗಿದೆ.

ಹೀಗಿರುವಾಗ, ವಿಶ್ವವು ವ್ಯಾಕೋಚನೆಗೊಳ್ಳುತ್ತಿದೆ ಎಂದಾಗ ಹಿಂದೆ ಒಂದು ಕಾಲದಲ್ಲಿ ಅದು ಸಂಕುಚಿತವಾಗಿದ್ದಿರಬೇಕಲ್ಲವೇ? ಎಂಬ ಪ್ರಶ್ನೆಯೆದ್ದು ಆ ಬಗ್ಗೆ ಸಂಶೋಧನೆಗಳು ನಡೆದವು. ಅಂತಹ ಗಣನೆಯ ಪ್ರಕಾರ 15,000 000 000 ವರ್ಷಗಳ ಹಿಂದೆ ವಿಶ್ವವು ಒಂದುಗೂಡಿಕೊಂಡ, ಅತಿ ಉಷ್ಣತೆಯ ಅತ್ಯಾಂತ ಭಾರದ ಒಂದು ಮುದ್ದೆಯಂತಿತ್ತು. ಅದನ್ನು ಆದಿಮ ಬ್ರಹ್ಮಾಂಡವೆಂದು ಕರೆಯಲಾಗುತ್ತದೆ. ಪ್ರೋಟಾನ್, ನ್ಯೂಟ್ರೋನ್, ಇಲೆಕ್ಟ್ರೋನ್ ಮುಂತಾದ ಕಣಸಮುಚ್ಚಯವಾದ ಆ ಮುದ್ದೆ ತನ್ನ ಭಾರದಿಂದ ಅಸಂಖ್ಯ ಚೂರುಗಳಿಗೆ ಒಡೆಯಿತು. ಈ ಸಿಡಿತವನ್ನು 'ಮಹಾಭಜನೆ' ಎನ್ನುವರು. ಇಂಥ ಆದಿ ವಿಶ್ವದ ಚೂರುಗಳಿಗೆ ಆದಿನೀಹಾರಿಕೆಯೆಂದು ಹೆಸರು. ಇಂತಹ ಆದಿನೀಹಾರಿಕೆಯ ಚಲನೆಗಳಿಂದ ಉಂಟಾಗುವ ಪ್ರಕ್ರಿಯೆಗಳಿಂದ ನಕ್ಷತ್ರಗಳು ಉತ್ಪನ್ನವಾಗುತ್ತವೆ. ಸೂರ್ಯನೂ ಹೀಗೆ ಹುಟ್ಟಿಕೊಂಡ ನಕ್ಷತ್ರ. ವಿಶ್ವವು ಇಂಥ ಅಗಾಧ ನಕ್ಷತ್ರಗಳ ತಾಣ.


ಕಾಲಾಂತರಗಳಲ್ಲಿ ಇಂಥ ನಕ್ಷತ್ರಗಳಲ್ಲಿ ವಿವಿಧ ಪ್ರಕ್ರಿಯೆಗಳಿಂದ ಸುಪರ್‌ನೋವಾ ಆಸ್ಫೋಟನೆ ನಡೆಯುತ್ತದೆ. ಒಂದು ಬ್ರಹ್ಮಾಂಡದಲ್ಲಿ ಒಂದು ಶತಮಾನದಲ್ಲಿ ಹಲವಾರು ಸಾವಿರ ಸುಪರ್ ನೋವಾಗಳಾಗುತ್ತದೆ.

ಈ ಬೆಳವಣಿಗೆಯ ಹಿನ್ನಲೆಯಲ್ಲಿ ಸುಮಾರು 5000 000 000 ವರ್ಷಗಳಷ್ಟು ಪ್ರಾಯವಾದ ಈ ಭೂಮಿಯಲ್ಲಿ ಕಾಲಾಂತರದಲ್ಲಿ ಜೀವಿಗಳು ಹುಟ್ಟಿಕೊಂಡವು. ಬಳಿಕ ವಿಕಾಸ ಚಕ್ರವಾಗಿ ಮಂಗನಿಂದ ಮಾನವನ ತನಕ ಬೆಳೆಯುತ್ತದೆ. ಅಂದರೆ ನೀವು ಹುಟ್ಟಿರುವುದು ಅಸಂಖ್ಯ ಸುಪರ್‌ನೋವಾಗಳ ನಾಶದಿಂದ ಉಂಟಾದ ಧೂಳಿನ ಕಣಗಳಿಂದ.

ಹೀಗೆ ಆಕಾಶ ವಿಜ್ಞಾನವನ್ನು ಅಭ್ಯಾಸಮಾಡುವಾಗ ಮಾನವ ಒಂದು ಕ್ಷುದ್ರಕೀಟವಾಗಿ ಗೋಚರಿಸುವುದು. ಆದರೆ ವಿಶ್ವದ ಆಗಾಧ ಜ್ಞಾನವನ್ನು ಅರ್ಥಮಾಡಿಕೊಳ್ಳುವಂಥ ಸಾಮರ್ಥ್ಯ ಇಂದು ಆ ಕೀಟಕ್ಕಿದೆ. ಆ ಸಾಮರ್ಥ್ಯ ಎಲ್ಲರಲ್ಲೂ ಇದೆ. ಅದಕ್ಕೆ ಅವಕಾಶ ಒದಗಬೇಕು.

## ವೈಜ್ಞಾನಿಕ ಮನೋಧರ್ಮ

'ವಿಜ್ಞಾನ'ವು ಇಂದು ವ್ಯಾಪಕ ಚಲಾವಣೆಯಲ್ಲಿರುವ ಒಂದು ಪದ. ಅದನ್ನು ಎಲ್ಲ ಕಡೆಗೂ ಸೇರಿಸುವ ಒಂದು ಚಟ ನಮ್ಮಲ್ಲಿ ಬೆಳೆದು ಬಂದಿದೆ. ಅಧ್ಯಾತ್ಮ ವಿಜ್ಞಾನ, ಸಮಾಜ ವಿಜ್ಞಾನ, ರಾಜಕೀಯ ವಿಜ್ಞಾನ ಇತ್ಯಾದಿ. ಹಾಗೆಯೇ ವೈಜ್ಞಾನಿಕ




ಪ್ರಾ. ಜಿ. ಟಿ. ನಾರಾಯಣರಾಯರು ಉಪನ್ಯಾಸವನ್ನು ಮಾಡುತ್ತಿರುವುದು. ಡಾ. ತಾಳ್ತಜೆಯವರು ಆಸಕ್ತಿಯಿಂದ ಆಲಿಸುತ್ತಿದ್ದಾರೆ.

ಮನೋಧರ್ಮವೂ ಕೂಡ. ಅದನ್ನು ಬಳಸಿದರೆ ನಾವು ಪ್ರಗತಿಪರರೆಂದೋ, ಬಳಸದೇ ಇದ್ದರೆ ಓಬೀರಾಯನ ಕಾಲದವರೆಂದೋ ಗುರುತಿಸಿಕೊಳ್ಳುತ್ತೇವೆ. ಆದರೆ ವೈಜ್ಞಾನಿಕ ಮನೋಧರ್ಮವು ಆಳವಾಗಿ, ಐತಿಹಾಸಿಕವಾಗಿ ಬೆಳೆದು ಬಂದ ಬಗೆಯನ್ನು ಅರ್ಥಮಾಡಿಕೊಳ್ಳುವುದೊಂದೇ ಇದರ ಸರಿಯಾದ ಕ್ರಮ. ವೈಜ್ಞಾನಿಕ ಮನೋಧರ್ಮವೆಂದರೆ ವಿಜ್ಞಾನಿಯ ಮನೋಧರ್ಮವಲ್ಲ.

ಮನುಷ್ಯ ನಿಸರ್ಗದ ಕೂಸು. ನೈಸರ್ಗಿಕ ಬಲಗಳು ಸೃಷ್ಟಿಸಿದ ಒಂದು ಜೀವಂತ, ಯೋಚನೆ ಮಾಡಬಲ್ಲ, ಸಂವಹನ ಮಾಡಬಲ್ಲ ಯಂತ್ರ ಈ ವ್ಯಕ್ತಿ. ನೈಸರ್ಗಿಕ ಬಲದ ಮೇಲೆ ನಮ್ಮ ಯಾವ ವಿಧದ ಕೈವಾಡವೂ ನಡೆಯುವುದಿಲ್ಲ. ನಾವು ಅದರ ಅಂಶ. ಇದಲ್ಲದೆ ಕೆಲವು ಮಾನವಕೃತ ಬಲಗಳೂ ಮಾನವನನ್ನು ರೂಪಿಸುತ್ತವೆ. ಅವುಗಳಲ್ಲಿ ಧರ್ಮ ಮತ್ತು ಪ್ರಭುತ್ವಗಳು ಮುಖ್ಯವಾದವು.

ಧರ್ಮ ತೀರಾ ವ್ಯಕ್ತಿ ನಿಷ್ಠವಾದುದಾದರೆ ನಿಸರ್ಗ ವಸ್ತುನಿಷ್ಠ. ವಿಜ್ಞಾನವೆಂದರೆ ನಾವು ನಿಸರ್ಗದ ಜೊತೆ ಕಾರ್ಯ ಕಾರಣ ಅನ್ವೇಷಣ ದೃಷ್ಟಿಯಿಂದ ನಡೆಸುವ ಸಂವಾದ. ಹೀಗೆ ವಿಜ್ಞಾನ ಒಂದು ವಿಧವಾದ ಶ್ರದ್ಧೆ. ಶ್ರದ್ಧೆಯಿಲ್ಲದೆ ಬದುಕು ಇಲ್ಲ. ಅದು ರೂಢಿ ಮೂಲವಾಗಿದ್ದು ನಿಸರ್ಗವನ್ನು ಅವಲಂಭಿಸಿದೆ.

ನಿಸರ್ಗವನ್ನು ಕುರಿತಂತೆ, ವಿಜ್ಞಾನವು ಪ್ರಮುಖವಾದ ಮೂರು ಶ್ರದ್ಧೆಗಳ ಆಧಾರದ ಮೇಲೆ ನಿಂತಿದೆ. ಅವುಗಳು (1) ವಿಶ್ವದಲ್ಲಿ ಒಂದು ಕ್ರಮಬದ್ಧತೆ ಇದೆ. (2) ಮನುಷ್ಯನ ಮತಿಗೆ ಈ ಕ್ರಮವನ್ನು ಗ್ರಹಿಸುವ, ಅರ್ಥವಿಸುವ, ಸಾಂಗೀಕರಿಸುವ, ಸಂವಹನೀಡುವ ಸಾಮರ್ಥ್ಯವಿದೆ. (3) ನಿಸರ್ಗವು ಬಹಳ ನವುರು, ಕೋಮಲ, ಸೂಕ್ಷ್ಮ, ಆದರೆ ಕಪಟಿಯಲ್ಲ. ಈ ಮೂರು ಶ್ರದ್ಧೆಗಳ ಆಧಾರಗಳ ಮೇಲೆಯೇ ವಿಜ್ಞಾನ ತನ್ನೆಲ್ಲಾ ಪ್ರಯೋಗಗಳನ್ನು ನಡೆಸಿವೆ. ಈ ಹಿನ್ನಲೆಯಲ್ಲೆ, ತನ್ನ ಎಲ್ಲ ಪ್ರಯೋಗಗಳಿಗೂ ಮಾನವ ಒಂದು ಕ್ರಮವನ್ನು ಕಂಡುಕೊಂಡಿದ್ದಾನೆ. ಅದನ್ನು ವೈಜ್ಞಾನಿಕ ವಿಧಾನ ವೆನ್ನುವರು. ಆ ಕ್ರಮವು ಮಾಹಿತಿಗಳ ಸಂಗ್ರಹಣೆ ವ್ಯವಸ್ಥಿತ ಅಲವಡಿಕೆ ರೂಪದ ಶೋಧನೆ ನಿಸರ್ಗಕ್ಕೆ ಅನ್ವಯಿಸಿ ನೋಡುವಿಕೆ ಹೀಗೆ ಬೆಳೆಯುತ್ತದೆ. ಯಾವುದೇ ವೈಜ್ಞಾನಿಕ ಸಮಸ್ಯೆಯೂ ಈ ವಿಧಾನದಲ್ಲೇ ಒಂದು ಸಿದ್ಧಾಂತ ಬರುವವರೆಗೆ ಮುಂದುವರಿಯುತ್ತದೆ.

ಹೀಗೆಯೇ ವ್ಯವಸ್ಥಿತವಾಗಿ ಕೆಲಸವನ್ನು ಮಾಡುವುದಕ್ಕೆ ಕಾರ್ಯ-ಕಾರಣ ಸಂಬಂಧ ರೂಪಿತ ದಿಶೆಯಲ್ಲಿ ಹೋಗುವಾಗ ನಮ್ಮ ಮನಸ್ಸಿಗೆ ಒಂದು ಸ್ಥಿತಿ ಬರುತ್ತದೆ. ಅಲ್ಲಿ ಮಾಡುವವನು ಯಾರು ಇತ್ಯಾದಿಗಳು ಗೌಣವಾಗಿ ಪ್ರಯೋಗ ಮಾತ್ರ ಮುಖ್ಯವಾಗುತ್ತದೆ. ಈ ಸ್ಥಿತಿಯೇ ವೈಜ್ಞಾನಿಕ ಮನೋಧರ್ಮ.

ಇದನ್ನು ಎಲ್ಲರಿಗೂ ಅರಿತುಕೊಳ್ಳಲು ಸಾಧ್ಯವಿದೆ. ಹೀಗೆ ಅರಿತುಕೊಂಡು, ರೂಢಿಸಿಕೊಂಡಾಗ ಜೀವನ ಸುಗಮವಾಗುತ್ತದೆ. ನಮ್ಮ ಮನಸ್ಸಿನೊಳಗೆ ಇರುವ ಸುಪ್ತ ಶಕ್ತಿ ಮತ್ತೆ ಮತ್ತೆ ಮೇಲೆ ವಿಕಾಸಕ್ಕೆ ಬಂದು ಅಷ್ಟರ ಮಟ್ಟಿಗೆ ಅವರಿಗೆ ಫಲಪ್ರದವಾಗುತ್ತದೆ.


ಆದರೆ ಪ್ರಭುತ್ವ ಮತ್ತು ಧರ್ಮ ನಮ್ಮನ್ನು ಹಿಡಿದು ಜಗ್ಗುತ್ತದೆ. ವಿಜ್ಞಾನ ಇದರ ಮಧ್ಯೆ ಸಿಕ್ಕಿ ಬಿಡುತ್ತದೆ. ಪಾರಮಾರ್ಥಿಕತೆ ಮತ್ತು ವಿಜ್ಞಾನ ವಿವೇಕವಾಗಿ ಹೋಗುವಾಗ ವೈಜ್ಞಾನಿಕ ಮನೋಧರ್ಮ ಅರ್ಥವಾಗುತ್ತದೆ. ಅದನ್ನು ಬಿಟ್ಟರೆ ಮನುಷ್ಯ ಬೆಳೆಯುವುದಿಲ್ಲ. ನಿಸರ್ಗವೇ ನಮಗೆ ಪ್ರೇರಣೆಗಳನ್ನು ಕೊಡುತ್ತಿದೆ. ನಾವು ಅದನ್ನು ಬಳಸಿಕೊಂಡರೆ ನಮ್ಮ ಮಾನಸಿಕ ದಿಗಂತ ವಿಸ್ತಾರವಾಗುತ್ತದೆ. ಜೀವನ ಉಲ್ಲಾಸವಾಗುತ್ತದೆ.

ಮೂರು ದಿನಗಳ ಈ ವಿಚಾರ ಪ್ರಚೋದಕ ಉಪನ್ಯಾಸ ಮಾಲೆಯ ಆರಂಭದಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಉಪಕುಲಗುರು ಡಾ. ಎಸ್. ಡಿ. ಕರ್ಣಿಕ್ ಅವರು ಉದ್ಘಾಟಿಸಿದರು. ಕೊನೆಯ ದಿನ ಪ್ರಾ. ಚಿದಂಬರ ದೀಕ್ಷಿತರು ಸಮರೋಪ ಭಾಷಣ ಮಾಡಿದರು. ಡಾ. ತಾಳ್ತಜೆ ವಸಂತ ಕುಮಾರರು ಸ್ವಾಗತಿಸಿ, ಅಸೋಸಿಯೇಶನ್ ಕಾರ್ಯದರ್ಶಿ ಶ್ರೀ ಪ್ರಸಾದ್ ವಂದಿಸಿದರು.

## ಪುಸ್ತಕ ಬಿಡುಗಡೆ

ತಾ. 4-1-1991ರಂದು ಸಂಜೆ 7-30ಕ್ಕೆ ಪ್ರಾ। ಕರ್ಣಿಕ್, ಮುಂಬಯಿ ವಿಶ್ವವಿದ್ಯಾಲಯದ ಪ್ರಾ। ಉಪಕುಲಗುರುಗಳು. ಶ್ರೀ A. S. ನಾಗರಾಜರಾಯರು 'ಪರಮಹಂಸಪ್ರಿಯ' ಎಂಬ ಕಾವ್ಯನಾಮದಡಿ ಬರೆದ "ಸ್ಟ್ರೇ ಮ್ಯೂಸಿಂಗ್ಸ್" ಎಂಬ ಪುಸ್ತಕದ ಬಿಡುಗಡೆ ಮಾಡಿದರು. ಪುಸ್ತಕದ ಕುರಿತು ಡಾ। H. S. ಶ್ರೀನಿವಾಸ್ ಅವರು ಮಾತನಾಡುತ್ತ, ನಾಗರಾಜರಾಯರ ಪ್ರಥಮ ಪ್ರಯತ್ನದಲ್ಲಿಯೇ ಸಾಕಷ್ಟು ಪರಿಪಕ್ವ ಅನುಭವದ ರಸಧಾರೆಯನ್ನು ಕಾಣಬಹುದೆಂದೂ, ಇದನ್ನು ಓದುವಾಗ ಡಿ.ವಿ.ಜಿ.ಯವರ 'ಮಂಕುತಿಮ್ಮನಕಗ್ಗ'ದ ನೆನಪಾಗುವುದೆಂದೂ ಹೇಳಿದರು. ಸಂಪೂರ್ಣ ಪುಸ್ತಕವನ್ನು ಓದುವಷ್ಟು ಸಮಯವಿರಲಿಲ್ಲವೆಂದೂ ಓದಿದ ಕೆಲವೇ ವಿಚಾರಧಾರೆಗಳಲ್ಲಿ "ಅಲ್ಫಾಂಸೊ" ತುಂಬಾ ಮೆಚ್ಚುಗೆಯಾಯ್ತೆಂದೂ, ಮಕ್ಕಳ ಬಗ್ಗೆ ವಿಶೇಷ ಕಳಕಳಿ ವ್ಯಕ್ತವಾಗುತಿತ್ತೆಂದೂ ಶ್ರೀನಿವಾಸ್ ತಿಳಿಸಿದರು. ಇತ್ತ ಗದ್ಯವೂ ಅಲ್ಲ ಅತ್ತ ಪದ್ಯವೂ ಅಲ್ಲದ ಈ ಸಂಗ್ರಹದಲ್ಲಿ ಬರುವ 108 ವಿಚಾರಗಳು ಜೀವನದಲ್ಲಿ ಕಾಣುವ ಎಲ್ಲಾ ವಿಷಯಗಳನ್ನೂ ಒಬ್ಬ ಜನಸಾಮಾನ್ಯದ ದೃಷ್ಟಿಯಲ್ಲಿ ತನ್ನದೇ ಆದ ಚಿಂತನೆಗೆ ಗುರಿಯಾಗಿರುವ ಬಗೆಯನ್ನು ಕಾಣಬಹುದಾಗಿದೆ ಎಂದರು.

ಶ್ರೀ ಕರ್ಣಿಕ್ ಅವರು ಮಾತನಾಡುತ್ತ "ಪರಮಹಂಸಪ್ರಿಯ"ರ ಸಾಹಿತ್ಯ ಸಾಧನೆ ಇನ್ನೂ ಹೆಚ್ಚು ಫಲವತ್ತಾಗಿ ಬೆಳೆಯಲಿ ಎಂದು ಹಾರೈಸಿದರು.




ಡಾ. S. D. ಕರ್ಣಿಕ್ ಅವರು ಶ್ರೀ A. S. ನಾಗರಾಜರಾಯರ ಪುಸ್ತಕ "ಸ್ಟ್ರೇ ಮ್ಯೂಸಿಂಗ್ಸ್"ವನ್ನು ಬಿಡುಗಡೆ ಮಾಡುತ್ತಿದ್ದಾರೆ.

# ಹೀಗೆ ಒಂದು ಪ್ರೇಮ ಪ್ರಕರಣ

- ಎನ್. ಜಿ. ನವಿಲೇಕರ್

ಮಧ್ಯಾಹ್ನ ಹನ್ನೊಂದೂವರೆಯ ಸಮಯ. ಗಾಂಧಿ ಬಜಾರಿನ ಮೂವತ್ತೊಂಭತ್ತನೇ ನಂಬರಿನ ಬಸ್ ಸ್ಟಾಪಿನಲ್ಲಿ ರಣಗುಟ್ಟುವ ಬಿಸಿಲಿನಲ್ಲಿ ಸುಮಾರು ಹದಿನೈದು ಜನರ ಸಾಲು ಬಸ್ಸಿಗಾಗಿ ಕಾಯುತ್ತಾ ನಿಂತಿತ್ತು. ಆಗೊಮ್ಮೆ ಈಗೊಮ್ಮೆ ಭರ್ರೆಂದು ಹೋಗುವ ಆಟೋರಿಕ್ಷಾದ ಶಬ್ದ ಕೇಳುತ್ತಿತ್ತು. ಎದುರಿನ ಮರದಿಂದ ಕಾಗೆಯೊಂದು ಕೂಗಿತು. ಬಸ್ಸಿನ್ನೂ ಬಂದಿರಲಿಲ್ಲ. ಬೆಳೆಯುತ್ತಿದ್ದ ಕ್ಯೂಗೆ ಹದಿನೇಳನೆಯವಳಾಗಿ ಈಗಿನ್ನೂ ಯುವತಿಯ ಪಟ್ಟಕ್ಕೆ ಕಾಲಿಡುತ್ತಿದ್ದ ಹುಡುಗಿಯೊಬ್ಬಳು ಬಂದು ಸೇರಿದಳು. ಫಳಫಳನೆ ಮಿಂಚುತ್ತಿದ್ದ, ಇತ್ತೀಚಿನ ಯಾವುದೋ ಚಿತ್ರದಲ್ಲಿ ಮೀನಾಕ್ಷಿ ಶೇಷಾದ್ರಿಯು ತೊಟ್ಟಿದ್ದರ ನಕಲಾಗಿದ್ದ, ಕಡು ನೀಲಿ ಬಣ್ಣದ ಸಲವಾರ ಕಮೀಜು, ಲಂಗೋಟಿಯಷ್ಟೇ ಅಗಲ, ಆದರೆ ಅದರ ನಾಲ್ಕರಷ್ಟು ಉದ್ದವಾಗಿದ್ದ ದುಪಟ್ಟಾದಲ್ಲಿ ಕಂಗೊಳಿಸುತ್ತಿದ್ದ ಆಕೆಯ ಕಿವಿಯಲ್ಲಿ ತಲಾ ಒಂದೊಂದು ನೀಲಿ ಪ್ಲಾಸ್ಟಿಕ್ಕಿನ ತ್ರಿಕೋನಾಕಾರದ ಚೂರು ನೇತಾಡುತ್ತಿತ್ತು. ಅವಳ ಕೈ ಮತ್ತು ಕಾಲಿನ ಉಗುರುಗಳಿಗೆ ಗುಲಾಬಿ ಬಣ್ಣವನ್ನು ಬಳಿಯಲಾಗಿತ್ತು. ಅವಳ ಕೂದಲನ್ನು ಕುತ್ತಿಗೆಯವರೆಗೆ ಟ್ರಿಮ್ ಮಾಡಲಾಗಿದ್ದು, ಸದ್ಯಕ್ಕೆ ಚಾಲ್ತಿಯಲ್ಲಿರುವ ಫ್ಯಾಷನ್ನಿಗನುಗುಣವಾಗಿ ಹಣೆಯ ಮೇಲಿನ ನಾಲ್ಕಾರು ಕೂದಲುಗಳನ್ನು ಗಾಳಿಯಲ್ಲಿ ಹಾರಾಡುವಂತೆ ಬಿಡಲಾಗಿತ್ತು. ಎಡಕೈಯಲ್ಲಿ ವಾಚನ್ನೂ, ಬಲಗೈಯಲ್ಲಿ ಅರ್ಧ ಡಜನ್ ನೀಲಿ ಬಳೆಯನ್ನೂ ಧರಿಸಿದ್ದ ಆಕೆ ಕಾಲಿನಲ್ಲಿ ಮೂರುವರೆ ಇಂಚಿನ ಹೈಹೀಲ್ಡಿನ, ಬಂಗಾರದ ಬಣ್ಣದ ಪಟ್ಟಿಯಿದ್ದ, ಚಪ್ಪಲಿಯನ್ನು ಮೆಟ್ಟಿದ್ದಳು. ಹೆಗಲಿನಿಂದ ಕಪ್ಪು ಬಣ್ಣದ ರೆಕ್ಸಿನ್ ವ್ಯಾನಿಟಿ ಬ್ಯಾಗು ಇಳಿ ಬಿದ್ದಿದು. ಅದರಲ್ಲಿ ಮಡಿಚಿಟ್ಟಿದ್ದ ಫಿಲಂಫೇರ್ ಮ್ಯಾಗಜಿನ್ ಹೊರಗೆ ಇಣುಕುತ್ತಿತ್ತು. ಈ ರೀತಿ ಅಲಂಕೃತಳಾದ ಆ ರಮಣೀ ಮಣಿಯ ಮುಖದ ಮೇಲಿನ ಪೌಡರು ಬಿಸಿಲಿಗೆ ಒದ್ದೆಯಾಗುತ್ತಿದ್ದರೂ ಬಸ್ಸು ಬರುವ ಲಕ್ಷಣವಿರಲಿಲ್ಲ. ಕ್ಯೂ ಬೆಳೆಯುತ್ತಿತ್ತು. ಗಂಟೆ ಹನ್ನೊಂದೂ ಮುಕ್ಕಾಲರ ಸುಮಾರು ಆಗಿತ್ತು. ಅಷ್ಟು ಹೊತ್ತಿಗೆ ಆ ಕ್ಯೂಗೆ ಹದಿನೆಂಟು ಇಪ್ಪತ್ತರ ಪ್ರಾಯದ ಎಳೆಯುವಕನೊಬ್ಬ ಬಂದು ನಿಂತ. ಸುಮಾರು ಐದೂವರೆ ಅಡಿ, ಐವತ್ತು ಕೆ.ಜಿ.ಯ ಆತ, ಹಳದು ಕೆಂಪು ಪಟ್ಟೆಯ ಟೀ-ಶರ್ಟು ತೊಟ್ಟಿದ್ದ. (ಅದು ಆತ ಮೆಜೆಸ್ಟಿಕ್‌ನ ಫುಟ್‌ಪಾತಿನ ಮೇಲೆ ಹದಿನೈದು ರೂಪಾಯಿಗೆಕೊಂಡದ್ದಾಗಿತ್ತು) ಆ ಟೀ-ಶರ್ಟಿನ ಎದೆಯ ಭಾಗದಲ್ಲಿ 'HEAVY WEIGHT CHAMPION' ಎಂಬ ದಪ್ಪಕ್ಷರದ ಬರಹದಿತ್ತು. ಆದರೆ ಅವನಿಗಿಂತ ಒಂದೂವರೆ ಪಟ್ಟು ಎತ್ತರ, ತೂಕದ ವ್ಯಕ್ತಿಗೆ ತಕ್ಕ ಸೈಜಿನದಾಗಿದ್ದ ಆ ಟೀ-ಶರ್ಟು ಅವನ ಭುಜಗಳಿಂದ ಜೋಲಾಮಾಲಿಯಾಗಿ ಇಳಿಬಿದ್ದಿತು. ಅದನ್ನು ಇನ್‌ಶರ್ಟ್ ಮಾಡಿ, ಪಂಟಲೂನ್ ಎಂದು ಕರೆಯಲಾಗುವ, ತೊಡೆಯ ಭಾಗದಲ್ಲಿ ಪೈಜಾಮದಂತಿದ್ದ, ಕೆಳಗೆ ಹೋಗುತ್ತಾ, ಚಿಕ್ಕದಾಗಿ ಕಾಲಗಂಟಿಗಿಂತ ಒಂದಿಂಚು ಮೇಲೆಯೇ ಹಠಾತ್ತನೇ ಕೊನೆಗೊಂಡಿದ್ದ, ಪ್ಯಾಂಟನ್ನು ಧರಿಸಿದ್ದ ಆದರ ಕೆಳಗೆ ಮೂಲತಃ ಬಿಳಿಯದಾಗಿದ್ದು, ಈಗ ಸದ್ಯ ನಸು ಹಳದಿ ಬಣ್ಣಕ್ಕೆ ತಿರುಗಿದ್ದ ಕಾಲುಚೀಲವೂ, ಚೂಪು ಮೂತಿಯ ಕಪ್ಪು ಬಣ್ಣದ ಬೂಟೂ ಶೋಭಿಸುತ್ತಿದ್ದವು ಅವನ ತಲೆಗೂದಲು ಅಕ್ಕಪಕ್ಕದಲ್ಲಿ ಸಣ್ಣದಾಗಿಯೂ, ತಲೆಯ ಮೇಲೆ ಉದ್ದವಾಗಿಯೂ ಇದ್ದು, ಅಲೆಗ್ಸಾಂಡರನ ಶಿರಸ್ತ್ರಾಣದ ತುರಾಯಿಯನ್ನು ನೆನಪಿಗೆ ತರುತ್ತಿತ್ತು. ಆತನ ಪ್ಯಾಂಟಿನ ಹಿಂದಿನ ಜೇಬಿನಿಂದ ಒಂದು ಕಪ್ಪು ಕನ್ನಡಕವೂ, ಹಸುರು ಬಣ್ಣದ ಬಾಚಣಿಗೆಯೂ ಹೊರ ಚಾಚಿದ್ದವು. ಆತ ಕೈಯಲ್ಲಿ ಹಿಡಿದಿದ್ದ ನೋಟು ಪುಸ್ತಕಗಳಿಂದ ಆತ ವಿದ್ಯಾರ್ಥಿಯಿದ್ದರೂ ಇರ ಬಹುದು ಎಂಬ ಸಂಶಯ ಬರುತ್ತಿತ್ತು. ಬರುವ ಶುಕ್ರವಾರ ಮೆಜೆಸ್ಟಿಕ್ಕಿನ ಟಾಕೀಸೊಂದರಲ್ಲಿ ಬಿಡುಗಡೆಯಾಗಲಿರುವ 'ಅಣ್ಣಾವರ' ಚಿತ್ರವೊಂದರ ಮುಂಗಡ ಬುಕಿಂಗ್ ಉದ್ದೇಶದಿಂದ, ಆತ ಅದೇ ಗುರಿಯಿಂದ, ಮೆಜೆಸ್ಟಿಕ್‌ನಲ್ಲಿ ಇವನಿಗಾಗಿ ಕಾಯುತ್ತೇನೆಂದು ಹೇಳಿದ್ದ ಗೆಳೆಯನನ್ನು ಸೇರುವುದಕ್ಕಾಗಿ ಈ ಮಟಮಟ ಮಧ್ಯಾಹ್ನದಲ್ಲಿ, ಅಪ್ಪನ ಕಣ್ಣಿಗೆ ಮಣ್ಣೆರಚಲು ಕೈಯಲ್ಲಿ ಪುಸ್ತಕ ಹಿಡಿದು, ಮನೆ ಬಿಟ್ಟಿದ್ದ.

ಪ್ರಿಯ ವಾಚಕರೇ, ನಮ್ಮ ಈ ಕಥಾ ನಾಯಕ, ನಾಯಕಿಯರನ್ನು ಸುದೀರ್ಘವಾಗಿ ಹೀಗೆ ಪರಿಚಯಿಸುವಲ್ಲಿ ಸಾಕಷ್ಟು ಹೊತ್ತು ಹೋದರೂ ಇನ್ನೂ ಬಸ್ಸಿನ ಪತ್ತೆಯಿರಲಿಲ್ಲ. ಕ್ಯೂನಲ್ಲಿ ನಿಂತವರು ಕೆಲವರು ಪೇಪರು ಬಿಚ್ಚಿ ಎರಡು ನಿಮಿಷಕ್ಕೊಮ್ಮೆ ಬಸ್ಸು ಬಂತೇ ಎಂದು ಕಣ್ಣಾಡಿಸಿ ಮತ್ತೆ ಪೇಪರಿನಲ್ಲಿ ತಲೆ ಹಾಕುತ್ತಿದ್ದರು. ಕೆಲವರು ಯಥಾಪ್ರಕಾರ ತಡವಾಗಿದ್ದ ಬಿ. ಟಿ. ಎಸ್. ಬಗ್ಗೆ ಯಥಾ ಪ್ರಕಾರ ಗೊಣಗುತ್ತಿದ್ದರು. ತಮ್ಮದೇ ಗುಂಗಿನಲ್ಲಿ ಕೆಲವರಿದ್ದರೆ ಮತ್ತೆ ಕೆಲವರು ಬೇಸತ್ತ ಮುಖ ಹೊತ್ತು ಸುಮ್ಮನೇ ನಿಂತಿದ್ದರು. ಐವತ್ತ ಮೂರನೇ ಸ್ಥಾನಾಂಕಿತನಾಗಿದ್ದ ನಮ್ಮ ಕಥಾ ನಾಯಕನಿಗೆ ನಿಂತಲ್ಲಿಯೇ ನಿಂತು 'ಬೋರ್' ಎನ್ನಿಸಲು ಶುರುವಾಯಿತು. ಅಲ್ಲದೇ ಬಸ್ಸು ತಡವಾಗಿ ಮಿತ್ರ ಸಿಕ್ಕದಿದ್ದರೆ ಎಂಬ ಕಾಳಜಿಯೂ ಮನಸ್ಸಿನ ಮೂಲೆಯಲ್ಲಿ ಮೂಡುತ್ತಿತ್ತು. ಬೇಸರ ಕಳೆಯಲು ಆತ ತನ್ನೆದುರಿಗಿದ್ದ ಜನರ ಸಾಲನ್ನು ಒಮ್ಮೆ ಸಿಂಹಾವಲೋಕನ ಮಾಡಿದ.

ಇದಕ್ಕಿದ್ದಂತೆ ಆ ಬಿಸಿಲಿನಲ್ಲೂ ಆತನಿಗೆ ಮಿಂಚು ಹೊಡೆದ ಅನುಭವವಾಯಿತು. ಆತನ ಕಣ್ಣಿಗೆ ಥಳಥಳಿಸುವ ನೀಲಿ ಸಲವಾರ ಕಮೀಜಿನ ಆಕೃತಿ ಕಣ್ಣಿಗೆ ಬಿದ್ದಿತ್ತು. ಆತನಿಗೆ ಬೇಸರ ಸ್ವಲ್ಪ ಕಡಿಮೆಯಾಗಿ, ಆ ವಯಸ್ಸಿನ ಯಾವುದೇ ಹುಡುಗ ಆ ವಯಸ್ಸಿನ ಯಾವುದೇ ಹುಡುಗಿಯತ್ತ ನೋಡಬಹುದಾದಷ್ಟು ಆಸಕ್ತಿಯಿಂದ ಆತ ಆಕೆಯನ್ನು ಗಮನಿಸಿದ. ಆಕೆಯ ಬಂಗಾರದ ಪಟ್ಟಿಯ ಚಪ್ಪಲಿಯಿಂದ ಹಿಡಿದು ಕಿವಿಯ ಪ್ಲಾಸ್ಟಿಕ್ಕಿನ ಆಭರಣದವರೆಗೆ ಎಲ್ಲವೂ ಆತನ ಪರಿಶೀಲನೆಗೆ ಒಳಗಾದವು.

ಹದಿನೇಳನೇ ನಂಬರಿನ ಕಥಾನಾಯಕಿಗೆ ಬಿಸಿಲಿನಲ್ಲಿ ನಿಂತು ಕಾಲು ನೋಯತೊಡಗಿತು. 'ಫಿಗರ್' ಸುಧಾರಿಸುವುದಕ್ಕಾಗಿ ಯಾವುದೋ ಪತ್ರಿಕೆಯ ಮಹಿಳಾ ಪುಟದಲ್ಲಿ ಪ್ರಕಟವಾಗಿದ್ದ ಡಯೆಟಿಂಗ್ ಅನ್ನು ಅನುಸರಿಸುತ್ತಿದ್ದ ಆಕೆ ಬೆಳಿಗ್ಗೆ ಕೇವಲ ಎರಡು ತುಂಡು ಬೆಣ್ಣೆಯಿಲ್ಲದ ಬ್ರೆಡ್ ಮಾತ್ರ ತಿಂದಿದ್ದ ಕಾರಣ, ಸದ್ಯ ಹೊಟ್ಟೆಯಲ್ಲಿ ತಾಳಮದ್ದಳೆ ಆಡತೊಡಗಿತ್ತು. ಮನೆಯಲ್ಲಿ ತಾಯಿ ಮಾಡಿದ್ದ ಇಡ್ಲಿ ಹಾಗೂ ಸೊಗಸಾದ ತೆಂಗಿನ ಕಾಯಿಚಟ್ನಿ, ಬೇಡ ಬೇಡವೆಂದರೂ ಮನಸ್ಸಿನಲ್ಲಿ ಸುಳಿದಾಡಿ ಬಾಯಿಯಲ್ಲಿ ನೀರು ತರಿಸುತ್ತಿತ್ತು. ಇಂತಾ ಪರಿಸ್ಥಿತಿಯಲ್ಲಿ ಮನಸ್ಸನ್ನು ತಿಂಡಿಯ ಯೋಚನೆಗಳಿಂದ ವಿಮುಖವಾಗಿಸಲು ಆಕೆ ತನ್ನ ವ್ಯಾನಿಟಿ ಬ್ಯಾಗಿನ ಜಿಪ್ ಅನ್ನು ಪರ್ರೆಂದು ಎಳೆದು ಫಿಲಂಫೇರ್ ಹೊರತೆಗೆದಳು. ಅದೇ ವೇಳೆಗೆ ಆಕೆಗೆ ಒಂದು ಜೋಡಿ ಕಣ್ಣುಗಳು ತನ್ನ ಮೇಲೆ ದೃಷ್ಟಿಯಿಟ್ಟಿರುವ ಅನುಭವವುಂಟಾಯಿತು. ಬೇರೆ ಯವರು ತನ್ನತ್ತ ನೋಡಲಿ ಎಂದು ಅಪೇಕ್ಷಿಸುವ ಹಾಗೂ ಖುಷಿಗೊಳ್ಳುವ ವಯಸ್ಸಿನ ಆಕೆಗೆ ಈ ಅನುಭವವೇನೂ ಹೊಸದಾಗಿರಲಿಲ್ಲ ಆದರೂ ಆ ಕಣ್ಣುಗಳ ಒಡೆಯ ಎಂಥವನಿರಬೇಕು ಎಂಬ ಕುತೂಹಲದಿಂದ ಆಕೆ ಸ್ವಲ್ಪವೇ ಕುತ್ತಿಗೆ ತಿರುಗಿಸಿ, ಕೊನೆಗಣ್ಣಿನಿಂದ ಹಿಂದೆ ನೋಡಿದಳು.

ಇಷ್ಟರಲ್ಲಾಗಲೇ ನಮ್ಮ ಕಥಾನಾಯಕನು ಕಥಾ ನಾಯಕಿಯರಲ್ಲಿ ತಾನು ಸಿನಿಮಾ ನಟಿಯವರಲ್ಲಿ ಕಂಡಿದ್ದು, ಕಂಡು ಮೆಚ್ಚಿದ್ದ, ಯಾವುದೇ ವೈಶಿಷ್ಟ್ಯವೂ ಗೋಚರಿಸದ ಕಾರಣ ಆ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸದೆ ಬೇರೆತ್ತಲೋ ನೋಡುತ್ತಿದ್ದ. ಮಿತ್ರನ ಭೇಟಿ ತಪ್ಪುವುದು ಹೆಚ್ಚು ಹೆಚ್ಚು ಖಾತ್ರಿಯಾಗುತ್ತಿದ್ದಂತೆ ಆತ ಅಸ್ವಸ್ಥನಾಗ ತೊಡಗಿದ.

ಕೊನೆಗಣ್ಣಿನಿಂದ ನೋಡುತ್ತಿದ್ದ ನಾಯಕಿಗೆ ಹಳದಿ, ಕೆಂಪು ಪಟ್ಟೆಯ ಬನಿಯನ್ನು ಕಣ್ಣಿಗೆ ಹೊಡೆಯಿತು. ತನ್ನನ್ನು ದಿಟ್ಟಿಸುತ್ತಿದ್ದ ಕಣ್ಣುಗಳು ಆ ದಿಕ್ಕಿನಿಂದಲೇ ಬಂದದ್ದು ಅವಳಿಗೆ ಖಚಿತವಾಗಿತ್ತು. ಆ ಬನಿಯನ್ನು, ಆ ಪ್ಯಾಂಟು, ಆ ಹೇರ್‌ಕಟ್ ಇತ್ಯಾದಿ ಯಾವುದೂ ಆಕೆಗೆ ಆತನಲ್ಲಿ ಆದರ ಭಾವವನ್ನು ಹುಟ್ಟಿಸಲು ಸಮರ್ಥವಾಗಲಿಲ್ಲ. ಹಾಗೆ ನೋಡಿದರೆ ಬನಿಯನ್ನಿನ ಕಣ್ಣಿಗೆ ರಾಚುವಂತಿದ್ದ ವರ್ಣ ಸಂಯೋಜನೆಯನ್ನು ಬಿಟ್ಟರೆ ನಾಲ್ಕು ಜನರಲ್ಲಿ ಎದ್ದು ಕಾಣುವಂಥಾ ಯಾವುದೇ ಅಂಶ ಸಹಾ ಆ ವ್ಯಕ್ತಿಯಲ್ಲಿ ಅವಳಿಗೆ ಗೋಚರಿಸಲಿಲ್ಲ. ಆಕೆ ಫಿಲಂ ಫೇರ್ ಬಿಚ್ಚಿ, ಅಮೀರಖಾನನ ನುಣ್ಣನೆಯ ಗಲ್ಲವನ್ನು ನೋಡುವುದರಲ್ಲಿ ತಲ್ಲೀನಳಾದಳು.

ಎರಡೇ ಕ್ಷಣದಲ್ಲಿ ಆಕೆಯ ಮನಸ್ಸು ಚಂಚಲವಾಯಿತು. ಆ ಯುವಕ ತನ್ನತ್ತ ಇನ್ನೂ ನೋಡುತ್ತಿರಬಹುದೇ ಎಂಬ ಸಣ್ಣ ಕುತೂಹಲ ಆಕೆಯಲ್ಲಿ ಉದ್ಭವಿಸಿತು. ಆತ ಸಿನಿಮಾದಲ್ಲಿ ಹೀರೋನೊಂದಿಗೆ ಹಿನ್ನಲೆಯಲ್ಲಿ ಕುಣಿಯುವ ಎಕ್ಸ್‌ಟ್ರಾ ನಟರಷ್ಟೇ ಆರ್ಡಿನರಿಯಾಗಿ ಇದ್ದರೇನು, ಆತನ ಕಣ್ಣಿಗೆ ತಾನು ಆಕರ್ಷಕವಾಗಿ ಕಂಡಿರಬಹುದಲ್ಲವೇ? ಕುತೂಹಲವನ್ನು ಹತ್ತಿಕ್ಕಲಾರದೆ ಆಕೆ ಮತ್ತೊಮ್ಮೆ ಕದ್ದು ಹಿಂದೆ ತಿರುಗಿ ನೋಡಿದಳು.

ಯಾವುದೇ ಉದ್ದೇಶವಿಲ್ಲದೇ ಈ ದಿಕ್ಕಿನಲ್ಲಿ ನೋಡುತ್ತಿದ್ದ ನಾಯಕನ ದೃಷ್ಟಿಯೊಂದಿಗೆ ನಾಯಕಿಯ ದೃಷ್ಟಿಯು ಒಂದು ಕ್ಷಣದ ಮಟ್ಟಿಗೆ ಮಿಲನವಾಗಿ ಬಿಟ್ಟಿತು. ನಾಯಕನಿಗೆ ಹಿಂದೊಮ್ಮೆ ಮನೆಯಲ್ಲಿ ಕತ್ತಲೆಯಲ್ಲಿ ಲೈಟು ಹಾಕಲು ಹೋಗಿ ಶಾಕ್ ಹೊಡೆಸಿಕೊಂಡಾಗ ಆದಂತಹುದೇ ಅನುಭವವಾಗಿ ಮೈಜುಮ್ಮೆಂದಿತು. ಎದೆ ಟಾರು ರಸ್ತೆ ಒಡೆಯಲು ಉಪಯೋಗಿಸುವ ನ್ಯೂಮಾಟಿಕ್ ಡ್ರಿಲ್‌ನಂತೆ ಬಡಬಡ ಶಬ್ದ ಮಾಡತೊಡಗಿತು. ರಕ್ತದ ಒತ್ತಡ ಹಠಾತ್ತನೆ ಹೆಚ್ಚಾಗಿ ಮೈಯೆಲ್ಲಾ ಬಿಸಿಯಾಯಿತು.

ನಾಯಕಿಯದೂ ಸಹ ಡಿಟ್ಟೋ ಪರಿಸ್ಥಿತಿಯಾಗಿತ್ತು. ಕಣ್ಣಿಗೆ ಕಣ್ಣು ಸೇರಿದೊಡನೆಯೇ ಆಟೋ ಮ್ಯಾಟಿಕ್ ಆಗಿ ಆಕೆ ಅವನತಮುಖಿಯಾದಳು. ಕಾಲಿನ ಹೆಬ್ಬೆರಳು ನೆಲವನ್ನು ಅಗೆಯ ತೊಡಗಿತು. ಇದು ಅಪ್ರಯತ್ನವಾಗಿ ಬಂದ ಸ್ವಾಭಾವಿಕ ಪ್ರತಿಕ್ರಿಯೆಯಾಗಿದ್ದು, ಎಲ್ಲರಿಂದಲೂ ಕಲಿತಿದ್ದಾಗಿರಲಿಲ್ಲ. ರಾಜಕುಮಾರ್ - ಲೀಲಾವತಿ ಕಾಲದ ಸಿನಿಮಾಗಳಲ್ಲಿ ಸಾದಾರಣವಾಗಿದ್ದ ಈ ಸ್ತ್ರೀ ಲಜ್ಜಾ ಪ್ರತೀಕವು. ಈಗಿನ ಸಿನಿಮಾಗಳಲ್ಲಿ ಔಟ್ ಡೇಟೆಡ್ ಆಗಿದ್ದರಿಂದ, ನಮ್ಮ ನಾಯಕನಿಗೆ ಅದರ ಪರಿಚಯವಿರುವುದು ಸಾಧ್ಯವಿರಲಿಲ್ಲ.

ಆ ಒಂದು ಕ್ಷಣದ ಅನುಭವದಿಂದ ತಲ್ಲಣಗೊಂಡಿದ್ದ ನಾಯಕಿ ನಿಧಾನವಾಗಿ ಚೇತರಿಸಿಕೊಂಡಳು. ಸಿಕ್ಕಾ ಪಟ್ಟೆ ಹೊಡೆದು ಕೊಳ್ಳುತ್ತಿದ್ದ ಹೃದಯ ನಾರ್ಮಲ್ ಆಯಿತು. ಯದ್ವಾತದ್ವಾ ಹರಿದಾಡುತ್ತಿದ್ದ ರಕ್ತ ಮತ್ತೆ ಮಂದಗಾಮನಿಯಾಯಿತು. ಈಗ ಆಕೆಯ ಮನಸ್ಸನ್ನು ನಾಚಿಕೆ ಹಾಗೂ ಮಜುಗರ ಎಂಬ ಭಾವನೆಗಳು ಆಕ್ರಮಿಸಿದವು. ಆಕೆ ಮತ್ತೆ ಫಿಲಂಫೇರ್ ತೆರೆದು ಕಳೆದ ವಾರದ ಫಿಲ್ಮಿ ಪಾರ್ಟಿಯಲ್ಲಿ ಯಾವ ನಟಿ ಯಾರೊಂದಿಗೆ ಯಾವ ವೇಷದಲ್ಲಿ ಬಂದಿದ್ದಳು. ಯಾರೊಂದಿಗೆ ಕುಣಿದಳು ಹಾಗೂ ಯಾರೊಂದಿಗೆ, ಯಾವ ಸ್ಥಿತಿಯಲ್ಲಿ ವಾಪಾಸು ಹೋದಳು ಎಂಬ ಬಗ್ಗೆ ರಸವತ್ತಾದ ವರದಿಯನ್ನು ಆಸಕ್ತಿಯಿಂದ ಓದತೊಡಗಿದಳು.

ಈ ವಿಚಿತ್ರ ಅನುಭವದಿಂದ ತಬ್ಬಿಬ್ಬಾಗಿದ್ದ ತರುಣನಿಗೆ ಆ ಹುಡುಗಿ ಕ್ಯೂನಲ್ಲಿದ್ದ ಇತರರಲ್ಲಿ ಒಬ್ಬಳಾಗಿ ಮಾತ್ರವೇ ಉಳಿಯದೆ, ಸ್ವಲ್ಪ ಹೆಚ್ಚಿನ ಕುತೂಹಲದ ವಸ್ತುವಾದಳು. ಆತ ಆಕೆಯತ್ತ ಆಗಾಗ ದೃಷ್ಟಿಯನ್ನು ಎಸೆಯತೊಡಗಿದ.

ಫಿಲಂಫೇರ್ ಓದುತ್ತಿದ್ದ ನಾಯಕಿಯ ಮನಸ್ಸಿನಲ್ಲಿ ಇನ್ನೂ ಆ ಅನುಭವ ಕುಟುಕುತ್ತಿತ್ತು. ಆ ಹುಡುಗ ತನ್ನತ್ತ ಮತ್ತೆ ಮತ್ತೆ ನೋಡುತ್ತಿರುವುದು ಆಕೆಗೆ ತಿಳಿದಿತ್ತು. (ಆಕೆ ಒಂದೆರಡು ಬಾರಿ ಹಿಂದೆ ತಿರುಗಿ ನೋಡಿ ಅದನ್ನು ಖಚಿತಪಡಿಸಿಕೊಂಡಿದ್ದಳು ಕೂಡ !). ಅವಳಿಗೆ ಸಣ್ಣಗೆ ಭಯ ಶುರುವಾಯಿತು. ಯಾವನೋ ಗುರುತು ಪರಿಚಯವಿಲ್ಲದ, ರಬ್ಬಾರುಬ್ಬಿ ಬಟ್ಟೆ ಹಾಕಿಕೊಂಡ, ಹುಡುಗನೊಬ್ಬ ಬಸ್ ಸ್ಟ್ಯಾಪಿನಲ್ಲಿ ನಿಂತು, ಒಬ್ಬಳು ಹುಡುಗಿಯತ್ತ ಪದೇ ಪದೇ ನೋಡುವುದು ಎಂದರೇನರ್ಥ? ಆತ ತನ್ನನ್ನು ಹಿಂಬಾಲಿಸಿ ಬಂದು, ನಿರ್ಜನ ಪ್ರದೇಶ ಬಂದೊಡನೆ ತನ್ನ ಹತ್ತಿರ ಬಂದು... ಸಲ್ಲದ ಯೋಚನೆಯಿದಂತೆ ಆಕೆಯ ಮೈ ಬೆವರಿತು. ಇದು ಯಾವ ಪೀಡೆ ತಗಲು ಹಾಕಿಕೊಂಡಿತು ಎಂದು ಅವಳಿಗೆ ಸಣ್ಣಗೆ ಭಯ ಮಿಶ್ರಿತ ಯೋಚನೆ ಶುರುವಾಯಿತು. ದರಿದ್ರ ಬಸ್ಸಾದರೂ ಬೇಗ ಬರಬಾರದೇ, ಎಂದು ಹಿಂದೆ ಶಪಿಸಿ ಹಿಂದೆ ತಿರುಗಿ ನೋಡಿದಳು. ಆ ನೆವದಲ್ಲಿ ಹಿಂದಿದ್ದ ಹುಡುಗನತ್ತ ಮತ್ತೊಮ್ಮೆ ಕ್ಷಣಾರ್ಧದ ದೃಷ್ಟಿ ಬೀರಿದಳು.

ಆ ತರುಣಿಯು ತನ್ನತ್ತ ಪದೇ ಪದೇ ನೋಡುತ್ತಿರುವುದನ್ನು ನೋಡಿ ಆ ಯುವಕನಿಗೆ ಕುತೂಹಲ ಕಳೆಗಟ್ಟತೊಡಗಿತು. ಆಕೆ ತನ್ನತ್ತ ನೋಡುವಷ್ಟರ ಮಟ್ಟಿಗೆ ತಾನು ಚೆನ್ನಾಗಿದ್ದೇನೆ ಎಂದು ಆತನಿಗೆ ಹೆಮ್ಮೆಯಾಯಿತು. ಹಿಂದೊಮ್ಮೆ ಯಾವುದೋ ಗೆಳೆಯನೊಬ್ಬ ಯಾವುದೋ ಆಯಂಗಲಿನಲ್ಲಿ ತಾನು ಪ್ರಸಿದ್ಧ ನಟನೊಬ್ಬನನ್ನು ಹೋಲುತ್ತೇನೆ ಎಂದು ಹೇಳಿದ್ದನ್ನು ಆತ ನೆನಪಿಸಿಕೊಂಡ. ಆನಂದದಿಂದ ಆತನ ಮುಖದ ಮೇಲೆ ಮುಗುಳುನಗೆ ಲಾಸ್ಯವಾಡಿತು. ಹೆಮ್ಮೆಯಿಂದ ಆತನ ಎದೆ ಉಬ್ಬಿತು. ಆತನ ಎಡಗೈ ಬೆರಳುಗಳು ಹಣೆಯ ಮೇಲಿನ ಕೂದಲನ್ನು ಹಿಂದಕ್ಕೆ ತೀಡಿದವು. ಆಕೆಯ ಬಗ್ಗೆ ಆತನ ಅಭಿಪ್ರಾಯ ಹಠಾತ್ತನೆ ಬದಲಾವಣೆಯಾಯಿತು. ಆಕೆ ಹೇಮಮಾಲಿನಿಯಂಥಾ ಸುಂದರಿಯಲ್ಲವಾದರೇನು? ಸ್ಮಿತಾ ಪಾಟೀಲಳಂತೆ ಆಕರ್ಷಕವಾಗಿದ್ದಾಳೆ ಎಂಬ ಅನ್ನಿಸಿಕೆ ಆತನ ಮನಸ್ಸಿನಲ್ಲಿ ಮೂಡತೊಡಗಿತು. ಆತ ಕುತೂಹಲಕ್ಕಿಂತಲೂ ಗಾಢವಾದ ಭಾವನೆಯಿಂದ ಆಕೆಯನ್ನು ದಿಟ್ಟಿಸ ತೊಡಗಿದ. ನಾಯಕನು ಎಡಗೈಯಿಂದ ತಲೆಗೂದಲನ್ನು ತೀಡಿಕೊಂಡ ಶೈಲಿಯನ್ನು ನೋಡಿ ನಾಯಕಿಗೆ ವಾರ ಪತ್ರಿಕೆಯೊಂದರಲ್ಲಿ ಸದ್ಯ ಪ್ರಕಟವಾಗುತ್ತಿದ್ದ, ತಾನು ಕಾತರದಿಂದ ಓದುತ್ತಿದ್ದ, ಧಾರವಾಹಿಯಲ್ಲಿ ಹಿರೋ ಹೀಗೇ ಮಾಡುವುದು ನೆನಪಾಯಿತು. ಆ ಹೀರೋ ನೀಳಕಾಯನೂ, ವಿಶಾಲವಾದ ಎದೆಯವನೂ ಆಗಿದ್ದ, ತುಂಬ ತೋಳಿನ ಬಿಳಿಯ ಶರಟು, ಗರಿಗರಿಯಾದ ಕಪ್ಪು ಪ್ಯಾಂಟನ್ನು ತೊಟ್ಟಿರುತ್ತಿದ್ದ. ಅವನಿಗೆ ಗುಂಗುರು ಕೂದಲಿತ್ತು. ಆತ ನಕ್ಕಾಗ ಕೆನ್ನೆಯಲ್ಲಿ ಗುಳಿ ಬೀಳುತ್ತಿತ್ತು. ಚಿಗುರು ಮೀಸೆ ಆತನ ದುಂಡು ಮುಖಕ್ಕೆ ಒಪ್ಪುತ್ತಿತ್ತು. ಆತ ಬೊಂಬಾಯಿಯ ದೊಡ್ಡ ಕಂಪನಿಯೊಂದರಲ್ಲಿ 'ಕೈತುಂಬಾ' ಸಂಬಳ ತರುವ ಹುದ್ದೆಯಲ್ಲಿದ್ದ. ಮೂರು ವಾರದ ಹಿಂದಿನ ಸಂಚಿಕೆಯಲ್ಲಿ ಅವನೂ, ಧಾರವಾಹಿಯ ನಾಯಕಿಯೂ ಅನಿರೀಕ್ಷಿತ ಸಂದರ್ಭದಲ್ಲಿ ಪರಿಚಿತರಾಗಿದ್ದರು. ಆಕೆಯೂ ಸುಂದರಿ, ವಿದ್ಯಾವಂತೆ ಇತ್ಯಾದಿ ಇತ್ಯಾದಿ ಆಗಿದ್ದಳು. ಕಳೆದ ಮೂರು ವಾರದಲ್ಲಿ ಅವರಲ್ಲಿ ಒಂದು ರೀತಿಯ ಲವ್ವು ಬೆಳೆಯುತ್ತಿತ್ತು. ಕಳೆದ ವಾರದ ಸಂಚಿಕೆಯಲ್ಲಷ್ಟೇ ಆ ಹೀರೋ ಅಮೆರಿಕಾಕ್ಕೆ ಹೆಚ್ಚಿನ ತರಬೇತಿಗೋಸ್ಕರ ಕಂಪನಿಯಿಂದ ಕಳಿಸಲ್ಪಟ್ಟಿದ್ದ.

ಒಟ್ಟಿನಲ್ಲಿ ಸದ್ಯದಲ್ಲಿ "ಚಿತ್ರೀಕರಣವಾಗುತ್ತಿರುವ ಕಾದಂಬರಿ" ಎಂಬ ಪಟ್ಟ ಹೊತ್ತು ಪುಸ್ತಕ ರೂಪದಲ್ಲಿ ಆ ಧಾರವಾಹಿ ಹೊರ ಬರುವುದರಲ್ಲಿ ಸಂದೇಹವಿರಲಿಲ್ಲ. ಹಾಗೂ ಆ ಚಿತ್ರ ಹಿಟ್ ಆಗುವುದರ ಬಗೆಗೆ ನಾಯಕಿಗೂ ಯಾವುದೇ ಸಂದೇಹವಿರಲಿಲ್ಲ. ಅವಳು ನಮ್ಮ ಕಥಾನಾಯಕನನ್ನು ಧಾರವಾಹಿಯ ನಾಯಕನ ಜಾಗದಲ್ಲಿ ಕಲ್ಪಿಸಿಕೊಂಡಳು. ಸ್ವಲ್ಪ ಪೇಚು ಎನ್ನಿಸಿದರೂ ಪರವಾಗಿಲ್ಲ ಎಂದುಕೊಂಡಳು.

ಒಟ್ಟಿನಲ್ಲಿ ನಮ್ಮ ಈ ಬಸ್ ಸ್ಟಾಪಿನ ಪ್ರಕರಣಕ್ಕೆ ರಂಗೇರ ತೊಡಗಿತ್ತು. ಅವಳಿಗೆ ಈಗ ಒಂದು ಗುಮಾನಿ ಬರತೊಡಗಿತು. ಆತ ತನ್ನನ್ನು ಪ್ರೀತಿಸುತ್ತಿರಬಹುದೇ ಎಂದು. ಹಾಸ್ಯ ಸಾಹಿತಿಯೊಬ್ಬರು ಹೇಳಿದಂತೆ ವಯಸ್ಸಿಗೆ ಬಂದರೆ ಕತ್ತೆಯೂ ಚೆನ್ನಾಗಿ ಕಾಣುತ್ತದೆ. ಇನ್ನೊಂದು ಕತ್ತೆಗೆ, ಅದರಲ್ಲಿಯೂ ಆ ಪ್ರಾಣಿಗಳ ರೋಮಾಂಟಿಕ್ ಭಾವನೆಗಳಿಗೆ ಧಾರವಾಹಿಗಳ, ಸರ್ಕ್ಯುಲೇಟಿಂಗ್ ಲೈಬ್ರರಿಯ ಜನಪ್ರಿಯ ಕಾದಂಬರಿಗಳ, ಕನ್ನಡ, ಹಿಂದಿ ಸಿನಿಮಾಗಳ ಸಮೃದ್ಧ ಹಿನ್ನಲೆಯಿತ್ತು ಎಂದ ಮೇಲೆ ಕೇಳಬೇಕೇ? ನಮ್ಮ ಎರಡೂ ಪಾತ್ರಗಳ ಮನಸ್ಸಿನ ಕುದುರೆಗಳೂ ಹುಚ್ಚೆದ್ದು ಕುಣಿಯ ತೊಡಗಿದವು. ಕನಸು ಕಾಣುವುದಕ್ಕೇನು ಕಾಸು ಕೊಡಬೇಕೆ?

ಅವಳು ಏರ್‌ಪೋರ್ಟಿನ ವಿಸಟರ್ಸ್ ಲೌಂಜಿನಲ್ಲಿ ಕಾಯುತ್ತಿದ್ದಳು. ಹತ್ತು ನಿಮಿಷದ ಕೆಳಗೆ ಸ್ಪೀಕರಿನಲ್ಲಿ ನ್ಯೂಯಾರ್ಕಿನ ವಿಮಾನ ಸದ್ಯದಲ್ಲಿಯೇ ಬಂದಿಳಿಯುವುದಾಗಿ, ಸಾರಲಾಗಿತ್ತು. ಆಕೆ ಈ ದಿನ ವಿಶೇಷ ಮುತುವರ್ಜಿಯಿಂದ ಅಲಂಕರಿಸಿಕೊಂಡಿದ್ದಳು. ಅವನಿಗಿಷ್ಟವಾದ ನಿಂಬೆಹಣ್ಣಿನ ಬಣ್ಣದ, ಅಂಚು ಸೆರಗಿಲ್ಲದ ಸೀರೆಯೂ, ಅದಕ್ಕೊಪ್ಪುವ ರವಕೆಯೂ, ಕೈಯಲ್ಲಿ ಮ್ಯಾಚಿಂಗ್ ಬಳೆಗಳೂ ಅವಳ ಶೋಭೆಯನ್ನು ಹೆಚ್ಚಿಸಿದವು. ಕಿವಿಯಲ್ಲಿ ನಿಂಬೆ ಹಣ್ಣಿನ ಸೈಜಿನ ಬಂಗಾರದ ಗಿಲೀಟಿನ ರಿಂಗುಗಳು ತೂಗಾಡುತ್ತಿದ್ದವು. ಕುತ್ತಿಗೆಯಲ್ಲಿ ಒಂದೆಳೆ ಚೈನು (ಹಿಂದೊಮ್ಮೆ ಅವನೇ ಅವಳ ಬರ್ಥ್‌ಡೇಯಂದು ಪ್ರೆಸೆಂಟ್ ಕೊಟ್ಟಿದ್ದದು !) ಹೊಳೆಯುತ್ತಿತ್ತು. ಕೈಯಲ್ಲಿ ಪುಷ್ಪ ಗುಚ್ಛವನ್ನು ಹಿಡಿದು ರಾಮನಿಗಾಗಿ ಶಬರಿಯಂತೆ ಆಕೆ ಕಾಯುತ್ತಿದ್ದಳು. ವಿಮಾನ ಬರುವ ವೇಳೆಯಾದಂತೆ ಆಕೆಯ ಕಾತರ ಹೆಚ್ಚುತ್ತಿತ್ತು. ಎದೆಯ ಡವಡವ ಶಬ್ದ ಜೋರಾಗುತ್ತಿತ್ತು. ದೂರದಲ್ಲಿ ಚುಕ್ಕೆಯಂತೆ ಕಾಣಿಸಿಕೊಂಡ ವಿಮಾನ ಬರಬರುತ್ತಾ ದೊಡ್ಡದಾಗಿ, ಅಂತೂ ನಿಶಬ್ದವಾಗಿ ನೆಲ ಮುಟ್ಟಿತು. ಅವಳ ಕಾತರ ಹೆಚ್ಚಾಗಿ ಉದ್ವಿಗ್ನಳಾದಳು. ವಿಮಾನಕ್ಕೆ ಆನಿಸಿದ ಏಣಿಯಿಂದ ಒಬ್ಬೊಬ್ಬರಾಗಿ ಇಳಿಯತೊಡಗಿದರು. ಅವಳ ಕಣ್ಣುಗಳು ಆ ಗುಂಪಿನಲ್ಲಿ ಒಂದೇ ಒಂದು ಪರಿಚಿತ ಆಕೃತಿಗಾಗಿ ಹುಡುಕುತ್ತಿದ್ದವು. ಅವನೆಲ್ಲಿ ಎಂದು ಅವಳ ಹೃದಯ ತವಕಿಸುತ್ತಿತ್ತು. ಅಂತೂ ಕೊನೆಗೂ ಆತ ಕಾಣಿಸಿದ. ಕಪ್ಪು ಬಣ್ಣದ ಸೂಟು, ಟೈ, ಬಿಸಿಲು ಗನ್ನಡಕದಲ್ಲಿ ಆತ ಮೊದಲಿಗಿಂತಲೂ ಆಕರ್ಷಕವಾಗಿ ಕಾಣುತ್ತಿದ್ದ. ಆತ ಗುಂಪಿನಲ್ಲಿ ಅವಳನ್ನು ಗುರುತಿಸಿ, ಕೈ ಬೀಸಿದ. ಇಲ್ಲಿಯವರೆಗೂ ಕಷ್ಟಪಟ್ಟು ತಾಳ್ಮೆಯಿಂದಿದ್ದ ಆಕೆ ಇನ್ನು ತಡೆಯದಾದಳು. ಆತನನ್ನು ತಕ್ಷಣ ಸೇರಬೇಕು, ಮಾತಾಡಬೇಕು ಎಂಬ ಆತುರದಲ್ಲಿ ಯಾರು ಏನೆಂದರು ಎಂದು ಲೆಕ್ಕಿಸಿದೆ ಆಕೆ ಅವನತ್ತ ಧಾವಿಸಿದಳು. ನೆರೆದ ಜನ ತಮ್ಮಷ್ಟಕ್ಕೇ ತಾವೇ ದಾರಿ ಬಿಟ್ಟರು.

"ಆsssಕ್ಷೀ" ಮುಂದಿದ್ದ ಮುದುಕ ನಿಶಬ್ದವಾಗಿ ಸೀನಿದ. ನಾಯಕಿ ಬೆಚ್ಚುಬಿದ್ದು ವಾಸ್ತವ ಲೋಕಕ್ಕೆ ಮರಳಿದಳು. ನಿಟ್ಟುಸಿರು ಬಿಟ್ಟು ಗಡಿಯಾರ ನೋಡಿಕೊಂಡಳು. ಹನ್ನೆರಡು ಹತ್ತಾಗಿತ್ತು. ಇನ್ನೂ ಬಾರದ ಬಸ್ಸಿಗಾಗಿ ಪಿಟಿ ಪಿಟಿ ಎಂದು ಶಪಿಸಿದಳು.

ಇತ್ತ ನಾಯಕ ಆಗಲೇ ನಾಯಕಿಯೊಂದಿಗೆ ಕಬ್ಬನ್‌ಪಾರ್ಕ್, ಲಾಲ್‌ಬಾಗ್ ಇತ್ಯಾದಿ ಲೋಕಲ್ ಜಾಗಗಳಲ್ಲಿ ಸುತ್ತುವುದು, ಅಭಿನಯ್ ಥಿಯೇಟರಿನ ಎಸ್ಕಲೇಟರಿನಲ್ಲಿ ಒಂದೇ ಮೆಟ್ಟಿನ ಮೇಲೆ ನಿಂತು ನಿಧಾನವಾಗಿ ಮೇಲೆ ಹತ್ತುವುದು, ಒಟ್ಟಿಗೆ ಕೂತು (ಬಾಕ್ಸಿನಲ್ಲಿ) ಕಡಲೇಕಾಯಿ ತಿನ್ನುತ್ತಾ ಅಮಿತಾಬ ಬಚ್ಚನನ ಸಿನೆಮಾ ನೋಡುವುದು ಇತ್ಯಾದಿ ಚಿಲ್ಲರೆ ಥ್ರಿಲ್ಲುಗಳನ್ನೆಲ್ಲಾ ಮುಗಿಸಿಯಾಗಿತ್ತು. ಈಗ ಆತನಿಗೆ ಮತ್ತೆ ಬೇಸರವಾಗತೊಡಗಿತು. ಆತ ಎದುರಿನವನ ಬಿಚ್ಚಿ ಹಿಡಿದು ಓದುತ್ತಿದ್ದ ಪೇಪರಿನತ್ತ ಅನಾಸಕ್ತಿಯಿಂದ ಕಣ್ಣಾಡಿಸಿದ. ಯಾವನೋ ಕ್ರಿಕೆಟರನ ಬ್ಯಾಟಿಂಗ್ ಭಂಗಿಯ ಚಿತ್ರವಿತ್ತು. ನಾಯಕ ಹಿಂದೊಮ್ಮೆ ನ್ಯಾಶನಲ್‌ಕಾಲೇಜು ಮೈದಾನದಲ್ಲಿ ಟೆನ್ನಿಸ್ ಬ್ಯಾಲ್ ಕ್ರಿಕೆಟ್ ಮ್ಯಾಚ್ ಆಡಿದ್ದಿತ್ತು. ಅದರಲ್ಲಿ ಆತ ಎಂಟನೇ 'ಡೌನ್' ಬ್ಯಾಟಿಂಗ್ ಮಾಡಿ ಔಟಾಗದೆ ಸೊನ್ನೆ ಹೊಡೆದಿದ್ದ.

ಲಾಹೋರ್ ಸ್ಟೇಡಿಯಮ್‌ನಲ್ಲಿ ಸಾಸಿವೆ ಕಾಳು ನೆಲಕ್ಕೆ ಬೀಳದಷ್ಟು ಜನಸಂದಣಿಯಿತ್ತು. ಅದು ಭಾರತ - ಪಾಕಿಸ್ತಾನ ನಡುವಿನ ಒಂದು ದಿನದ ಕೊನೆಯ ಪಂದ್ಯವಾಗಿತ್ತು. ಭಾರತ ಈ ಪಂದ್ಯವನ್ನು ಗೆಲ್ಲಲೇಬೇಕಾದ ಪರಿಸ್ಥಿತಿಯಿತ್ತು. ಆದರೇನು ಸದ್ಯದಲ್ಲಿ ಪರಿಸ್ಥಿತಿ ಚಿಂತಾಜನಕವಾಗಿತ್ತು. ಭಾರತದ ಖ್ಯಾತ ನಾಮರೆಲ್ಲಾ ಔಟಾಗಿ ವಾಪಾಸು ಬಂದಿದ್ದರು. ಗೆಲುವು ಇನ್ನೂ ಬಹುದೂರವಿತ್ತು. ಡ್ರೆಸ್ಸಿಂಗ್ ರೂಮಿನಲ್ಲಿ ಗಾಢ ಹತಾಶೆಯ ವಾತಾವರಣವಿತ್ತು. ಇದ್ದಕ್ಕಿದಂತೆ

ಕ್ಯಾಪ್ಟನ್ ಎದ್ದು ಹೊರನಡೆದ. ಎಲ್ಲರೂ ಅವಕ್ಕಾಗಿ ನೋಡುತ್ತಿದ್ದಂತೆ ಆತ ಪಕ್ಕದ ಗ್ಯಾಲರಿಯಲ್ಲಿ ಒಟ್ಟಿಗೆ ಕೂತು ನೋಡುತ್ತಿದ್ದ ನಾಯಕ ನಾಯಕಿರತ್ತ ಹೋಗಿ ನಾಯಕನಿಗೆ ಅಂಗಲಾಚಿದ "ಪ್ಲೀಸ್, ಸಾರ್, ನಮ್ಮ ಪರಿಸ್ಥಿತಿ ನಾಯಿಪಾಡಾಗಿದೆ. ದೇಶಕ್ಕೆ ಈಗ ನಿಮ್ಮ ಸೇವೆ ಬೇಕಾಗಿದೆ. ನಮ್ಮ ಟೀಮಿನ ಮರ್ಯಾದೆ, ಪ್ರತಿಷ್ಠೆ ಉಳಿಸುವ ಜವಾಬ್ದಾರಿ ನಿಮ್ಮ ಕೈಯಲ್ಲಿದೆ. ದಯವಿಟ್ಟು ಇಲ್ಲ ಎನ್ನಬೇಡಿ" ನಾಯಕ ಏನೂ ಹೇಳಲು ತೋರದೆ, ನಾಯಕಿಯತ್ತ ನೋಡಿದ, ಆಕೆ ಕಣ್ಣಿನಲ್ಲಿಯೇ ಒಪ್ಪಿಗೆ ಸೂಚಿಸಿದಳು. ನಾಯಕ ಎದ್ದು ಹೊರಟ. ಕ್ಯಾಪ್ಟನ್ ಹಗುರ ಮನಸ್ಸಿನಿಂದ ಅವನನ್ನು ಹಿಂಬಾಲಿಸಿದ. ಎರಡೇ ನಿಮಿಷದಲ್ಲಿ ನಾಯಕ ಕ್ರಿಕೆಟ್ ಬ್ಯಾಟಿಗನ ಉಡುಗೆಯಲ್ಲಿ ಪಿಚ್‌ನಲ್ಲಿದ್ದ. ಆಗಿನಿಂದ ಆಟದ ಬಣ್ಣವೇ ಬದಲಾಯಿತು. ಏನು ಕಟ್‌ಗಳು, ಏನು ಡ್ರೈವ್‌ಗಳು. ಏನು ಹುಕ್‌ಗಳು ! ಪ್ರೇಕ್ಷಕರು ದಂಗು ಬಡಿದು ಹೋದರು. ಸಿಕ್ಸರುಗಳದ್ದಂತೂ ಮಳೆಯೇ ಸುರಿಯುತ್ತಿತ್ತು. ಬೌಲರುಗಳು ಹಲ್ಲು ಕಡಿದರು, ಹಣೆ ಚಚ್ಚಿಕೊಂಡರು, ಕೂದಲು ಕಿತ್ತುಕೊಂಡರು. ಬೌಂಡರಿಗೆ ಓಡಿ ಓಡಿ ಫಿಲ್ಡರುಗಳು ಬಸವಳಿದರು. ಭಾರತದ ಸ್ಕೋರು ಹಾವು ಕಡಿದವನಿಗೆ ವಿಷ ಏರಿದಂತೆ ಏರುತ್ತಿತ್ತು. ಸೋಲಿನ ದವಡೆಯಲ್ಲಿದ್ದ ಭಾರತ ಈಗ ವಿಜಯದ ಹೊಸ್ತಿಲಿನಲ್ಲಿತ್ತು. ವಿಜಯಕ್ಕೆ ಕೇವಲ ಎರಡೇ ರನ್ನು ಬೇಕಾಗಿತ್ತು. ನಾಯಕ ಎತ್ತಿ ಹೊಡೆದ ರಭಸಕ್ಕೆ ಚೆಂಡು ಸ್ಟೇಡಿಯಮ್ಮಿನ ಹೊರಗೆ ಬಿದ್ದು ಯಾವುದೇ ಲಾರಿಯ ಕೆಳಗೆ ಸಿಕ್ಕಿ ಮರಣ ಹೊಂದಿತು. ಸ್ಟೇಡಿಯಮ್ಮಿನ ಅರವತ್ತು ಸಾವಿರ ಜನ ಎದ್ದು ನಿಂತು ಒಂದೇ ಧ್ವನಿಯಲ್ಲಿ ಜಯಕಾರ ಮಾಡಿದರು. ನಾಯಕ ದೇಶದ ಮರ್ಯಾದೆ ಉಳಿಸಿದ. ತೃಪ್ತಿಯಿಂದ ಪೆವಲಿಯನ್ನಿನತ್ತ ಹೆಜ್ಜೆ ಹಾಕಿದ. ಕಾಮೆಂಟೇಟರುಗಳು ಈ ಬಗ್ಗೆ ಆಟದ ವೈಖರಿಯನ್ನು ವರ್ಣಿಸಲು ಶಬ್ದಗಳೇ ಸಾಲದೆ 'ಬೆಬ್ಬೆಬ್ಬೆ' ಎನ್ನುತ್ತಿದ್ದರು. ನಾಯಕ ಪೆವಲಿಯನ್ನಿನ ಹತ್ತಿರ ಪ್ಯಾಡು ಬಿಚ್ಚಿ, ಆಟೋಗ್ರಾಫಿಗೆ ಮುತ್ತುತ್ತಿದ್ದ ಜನರಿಂದ ಬಿಡಿಸಿಕೊಂಡು ನೆಟ್ಟಗೆ ನಾಯಕಿಯತ್ತ ನಡೆದ. ಆತನ ಕೆಲಸ ಮುಗಿದಿತ್ತು. ನಾಯಕಿಯ ಕಣ್ಣಿನ ಮೆಚ್ಚುಗೆಯ ಆರಾಧನಾ ಭಾವದ ನೋಟದ ಮುಂದೆ ಅವನಿಗೆ ಆ ಸ್ಟೇಡಿಯಂನ ಜಯಕಾರ, ಚಪ್ಪಾಳೆ ಎಲ್ಲವೂ ತುಚ್ಛವಾಯಿತು.

ಬಸ್ಸು ಬಂದ ಶಬ್ದವಾಯಿತು. ಕ್ಯೂನಲ್ಲಿದ್ದ ಸಮಸ್ತ ಜನವೂ ಖುಷಿಯಿದ ಶಬ್ದ ಬಂದತ್ತ ನೋಡಿದರು. ಒಂದು ಡಬಲ್ ಡೆಕರ್ ಬಸ್ ಬಂದು ನಿಂತಿತ್ತು. ಅದರ ಹಣೆಯ ಮೇಲಿನ ಪಟ್ಟಿ ಖಾಲಿಯಾಗಿತ್ತು. ಬಸ್ಸು ನಿಲ್ಲಿಸಿ, ಎಂಜಿನ್ ಆಫ್ ಮಾಡಿ, ಡ್ರೈವರ್ ಪಕ್ಕದ ಬಾಗಿಲಿನಿಂದ ಹೊರ ನೆಗೆದ. ತೊಡೆ ಕೆರೆದುಕೊಳ್ಳುತ್ತಾ ಎದುರಿಗೆ ಸಾಲುಗಟ್ಟಿದ್ದ ಜನರನ್ನು ಒಮ್ಮೆ ಸಿಂಹಾಲೋಕನ ಮಾಡಿದ. ಆ ಜನಗಳ ಸದ್ಯದ ಪರಿಸ್ಥಿತಿಯಲ್ಲಿ ತನಗೆ ಪ್ರಾಪ್ತವಾಗಿದ್ದ ಮಹತ್ವದ ಸ್ಥಾನದಿಂದ ಬೀಗುತ್ತಾ ಆತ ಗಾಂಭೀರ್ಯದಿಂದ ನಿದಾನವಾಗಿ ಕಾಲಿನ ಗಿರಕಿ ಚಪ್ಪಲಿಯನ್ನು ಚರಕ್ ಚರಕ್ ಎನ್ನಿಸುತ್ತಾ ಬಸ್ ಸ್ಟಾಪಿನ ಹಿಂದಿದ್ದ ಬೀಡಿನ ಅಂಗಡಿಯತ್ತ ನಡೆದ. ಪತಿವ್ರತಾ ಸ್ತ್ರೀಯು ಗಂಡನನ್ನು ಹಿಂಬಾಲಿಸುವ ವೈಖರಿಯಲ್ಲಿ ತೆಳ್ಳನೆಯ, ಕುಳ್ಳನೆಯ ಕಂಡಕ್ಟರ್ ಅವನ ಹಿಂದೆ ನಡೆದ. ಬೀಡಿ ಅಂಗಡಿಯವನು ಪರಿಚಿತ ನಗೆ ಬೀರಿ ಅವರನ್ನು ಸ್ವಾಗತಿಸಿದ.

ಬಸ್ಸು ಬಂದಿತೆಂದು ಆಸೆಯಿಂದ ಕಾಯುತ್ತಿದ್ದ ಜನರಲ್ಲಿ ಅನುಭವಸ್ಥರು ಡ್ರೈವರು ಬಸ್ಸು ನಿಲ್ಲಿಸಿ ಬೀಡಿ ಅಂಗಡಿಯತ್ತ ಬಿಜಯಂಗೈದುದನ್ನು ನೋಡಿ, ಬಸ್ಸು ಹೊರಡಲು ಇನ್ನೂ ಹದಿನೈದು ಇಪ್ಪತ್ತು ನಿಮಿಷಗಳಾದರೂ ಬೇಕು ಎಂದು ಅರಿತುಕೊಂಡು ಪುನಃ ತಮ್ಮ ತಮ್ಮ ಯೋಚನೆಯಲ್ಲಿ, ಚಟುವಟಿಕೆಯಲ್ಲಿ ಮಗ್ನರಾದರು. ಇತರರಲ್ಲಿ ಒಬ್ಬಳಾದ ನಾಯಕಿಯೂ ಬಸ್ಸು ಹೊರಟೀತೆಂದು ಕಾದಳು. ಎರಡು ನಿಮಿಷವಾಯಿತು. ಡ್ರೈವರನ ಬೀಡಿ ಅರ್ಧ ಮುಗಿದಿತ್ತು. ಅವನು ಕಂಡಕ್ಟರನಿಗೆ ಏನೋ ರಸವತ್ತಾದ ವಿಷಯವನ್ನು ಭಾವ ಭಂಗಿಗಳೊಂದಿಗೆ ವಿವರಿಸುತ್ತಿದ್ದ. ಕಂಡಕ್ಟರ್ ಹಾಗೂ ಬೀಡಿ ಅಂಗಡಿಯವನು ಅದನ್ನು ಮನದಣಿಯ ಆನಂದಿಸುತ್ತಿದ್ದರು ಎಂಬುದು ಅವರ ನಗೆಯಿಂದ ವ್ಯಕ್ತವಾಗುತ್ತಿತ್ತು. ನಾಯಕಿಯು ಕಾಯುತ್ತಲೇ ಇದ್ದಳು. ಐದು ನಿಮಿಷವಾಯಿತು. ಡ್ರೈವರ್, ಕಂಡೆಕ್ಟರ್ ಯಥಾ ಸ್ಥಿತಿಯಲ್ಲಿದ್ದರು. ನಾಯಕಿ ಬೇಸತ್ತು ಪುನಃ ಫಿಲಂಫೇರ್ ಬಿಚ್ಚಿದಳು. ಯಾವುದೋ ಸಿನಿಮಾದ ಭವ್ಯ ದೃಶ್ಯದ ಚಿತ್ರವೊಂದನ್ನು ಅರೆಮನಸ್ಸಿನಿಂದ ನೋಡತೊಡಗಿದಳು.

ಅದು ನಂದಿಬೆಟ್ಟವೋ, ಮಹಾಬಲೇಶ್ವರವೋ ಒಟ್ಟಿನಲ್ಲಿ ಯಾವುದೋ ಒಂದು ನಿಸರ್ಗ ಸೌಂದರ್ಯದ ಸ್ಥಳವಾಗಿತ್ತು. ಗುಡ್ಡದ ಆ ನೆತ್ತಿಯಿಂದ ಸುತ್ತ ನೋಡಿದಲ್ಲೆಲ್ಲಾ ಹಸಿರು ಕಣ್ತುಂಬುತ್ತಿತ್ತು. ನೆಲದ ಮೇಲೆ ಹೂವಿನ ಹಾಸಿಗೆ ಹಾಸಿತ್ತು. ಇಂಥಾ ರೊಮ್ಯಾಂಟಿಕ್ ಪ್ರದೇಶದಲ್ಲಿ ನಾಯಕ, ನಾಯಕಿ ಹಾಡು ಹೇಳುತ್ತಾ ಕುಣಿಯುತ್ತಿದ್ದರು. ಅವನು ಒಂದು ಸಾಲು ಹೇಳಿದರೆ, ಅವಳು ಒಂದು ಸಾಲು ಹೇಳುತ್ತಿದ್ದಳು. ಆಮೇಲೆ ಇಬ್ಬರೂ ಮೂರನೇ ಸಾಲು ಹೇಳುತ್ತಾ ಅಲ್ಲಿದ್ದ ಮರಗಳ ಸುತ್ತ ಸುತ್ತುತ್ತಾ ಡ್ಯಾನ್ಸು ಮಾಡುತ್ತಿದ್ದರು. ಅವರು ಹಾಡು ನಿಲ್ಲಿಸುತ್ತಿದ್ದಂತೆ ಅರವತ್ತು, ಎಪ್ಪತ್ತು ವಾದ್ಯಗಳ ಸಂಗೀತ ತೇಲಿ ಬರುತ್ತಿತ್ತು. ಹೀಗೇ ಎರಡು ಮೂರು ನಿಮಿಷ ನಡೆಯಿತು. ಈಗಾಗಲೇ ನಾಯಕ್, ನಾಯಕಿ ಅನೇಕ ಬಾರಿ ಡ್ರೆಸ್ಸು ಬದಲಾಯಿಸಿದ್ದರು. ಹಠಾತ್ತನೆ ಮಳೆ ಬಂದಿತು. ಮಳೆ ಎಂದರೇನು, ಜರಡಿಯಿಂದ ನೀರು ಬಿದ್ದಂತೆ ದಪ್ಪ ದಪ್ಪ ಹನಿಯ ಮಳೆ. ನಾಯಕ, ನಾಯಕಿ ತೊಯ್ದು ತೊಪ್ಪೆಯಾದರು. ನಾಯಕಿಯ ಮೈಮೇಲೆ ಮಳೆ ಜಾಸ್ತಿ ಬಿದ್ದಿತೇನೋ ಯಾಕೆಂದರೆ ಅವಳ ಸೀರೆ ಮೈಗಂಟಿಕೊಂಡಿದ್ದು ಮತ್ತೆ ಮತ್ತೆ ಗೋಚರವಾಗುತ್ತಿತ್ತು. ಆದರೇನು ಮುಖದ ಮೇಲಿನ ಮೇಕಪ್ ಮಾಸಿರಲಿಲ್ಲ. ಇದಕ್ಕಿದ್ದಂತೆ ದೃಶ್ಯ ಬದಲಾಯಿತು.

ಅದೊಂದು ಭವ್ಯ ಅರಮನೆ. ಶುದ್ಧ ಪ್ಲಾಸ್ಟರ್ ಆಫ್ ಪ್ಯಾರೀಸ್ ಹಾಗೂ ಪ್ಲೈವುಡ್ಡಿನಿಂದ ನಿರ್ಮಿಸಲಾಗಿತ್ತು. ಆ ಅರಮನೆಯ ಛಾವಣಿಯಲ್ಲಿ ರಾಜಕುಮಾರಿಯ ರೂಪದಲ್ಲಿ ನಾಯಕಿ ದುಃಖದ ಮುಖ ಹೊತ್ತು ಕುಳಿತ್ತಿದ್ದಳು. ಹಿಂದೆ ನೀಲಿ ಆಕಾಶ ತುಂಬಿತ್ತು. ಅದರ ಮೇಲೆ ಕಾರ್ಡ್‌ಬೋರ್ಡಿನ ಬಿದಿಗೆ ಚಂದ್ರ ನೇತಾಡುತ್ತಿದ್ದ. ಹಾಗೂ ಗಾಳಿ ಬಂದಾಗ ಅಲುಗಾಡುತ್ತಿದ್ದ ಹಿನ್ನಲೆಯಲ್ಲಿ ಬಣ್ಣ ಬಣ್ಣದ ಹೊಗೆ ನೆಲದಿಂದ ಮೇಲೇಳುತ್ತಿತ್ತು. ಅಲ್ಲಲ್ಲಿ ಅಡಗಿಸಿಟ್ಟಿದ್ದ ವಿದ್ಯುದ್ ದೀಪಗಳ ಬೆಳಕಿನಿಂದ ರಮ್ಯವಾತಾವರಣ ಸೃಷ್ಟಿಯಾಗಿತ್ತು. ಒಟ್ಟಿನಲ್ಲಿ ಯಾವುದೋ ಹದಿನೈದನೇ ಶತಮಾನದ ಅರಮನೆ ಇದ್ದರೂ ಇರಬಹುದು ಎಂಬ ಗುಮಾನಿ ಬರುತ್ತಿತ್ತು. ನಾಯಕಿ ಮೈತುಂಬ ಆಭರಣಗಳನ್ನು ಧರಿಸಿದ್ದಳು. ಸೇವಕಿಯರು ಗಾಳಿ ಹಾಕುತ್ತಿದ್ದರು. ಟೇಬಲಿನ ಮೇಲೆ ಹಣ್ಣು ಹಂಪಲು ತಂಬಿದ್ದ ತಟ್ಟೆಯಿತ್ತು. ಇಷ್ಟೆಲ್ಲಾ ಇದ್ದರೂ ನಾಯಕಿಗೆ ಈ ರಾತ್ರಿ ಸಂತೋಷವಿರಲಿಲ್ಲ. ಯಾಕೆಂದರೆ ಅವಳಿಗೆ ಪ್ರಿಯಕರನ ನೆನಪು ಬಾಧಿಸುತ್ತಿತ್ತು. ಅವಳು ನಿಂತಲ್ಲಿ ನಿಲ್ಲದೇ, ಕೂತಲ್ಲಿ ಕೂರದೇ ನಿಧಾನವಾಗಿ ಒಂದು ವಿರಹದ ಹಾಡನ್ನು ಒಬ್ಬಳೇ ಹಾಡಿದಳು. ಮಧ್ಯೆ-ಮಧ್ಯೆ ಹೃದಯ ಬೇಧಕ ರಾಗದಲ್ಲಿ ಹಿನ್ನಲೆಯಲ್ಲಿ ಪಿಟೀಲೊಂದು ಕುಂಯ್ ಗುಡುತ್ತಿತ್ತು. ಹಾಡು ಮುಗಿಯುತ್ತಾ ಬಂದಂತೆ ಅವಳ ದುಃಖವೂ ಹೆಚ್ಚಾದಂತೆ ಕಾಣುತ್ತಿತ್ತು. ಸಂಗೀತವೂ ಜೋರು ಜೋರಾಗ ತೊಡಗಿತು. ಇದ್ದಕ್ಕಿದ್ದಂತೆ ಒಡೆಯುವಂಥಾ ಶಬ್ದವಾಯಿತು. ನಾಯಕಿಯ ಅರಮನೆಯ ಬಾಗಿಲು ಮುರಿದು ಬಿದ್ದಿತ್ತು. ಆ ಜಾಗದಲ್ಲಿ ರಾಜಕುಮಾರನ ರೂಪದಲ್ಲಿ ನಾಯಕ ಅವತರಿಸಿದ್ದ. ಅವನನ್ನು ನೋಡಿದೊಡನೆಯೇ ನಾಯಕಿಯ ದುಃಖವೆಲ್ಲಾ ಆವಿಯಾಗಿ, ಸಂತೋಷ ತಿರೆಕಾದಲ್ಲಿ ಆಕೆ ಕನಸೇ, ನನಸೇ ಎಂದು ತನ್ನನ್ನು ಚಿವುಟಿಕೊಂಡಳು.

'ಹಾಯ್' ನಾಯಕಿ ನೋವಿನಿಂದ ಅರಚಿದಳು. ಚಿವುಟಿದ್ದರ ನೋವು ಜೋರಾಗಿಯೇ ಇತ್ತು. ಆಕೆ ವಾಸ್ತವಕ್ಕೆ ಬಂದು ಅತ್ತಿತ್ತ ನೋಡಿದಳು.

ಇತ್ತ ನಾಯಕ ನಾಯಕಿಯೊಂದಿಗೆ ಯಾವ ಟೆರಿರಿಸ್ಟ್‌ಗಳ ಭಯವೂ ಇಲ್ಲದೆ ಕಾಶ್ಮಿರದ ದಾಲ್ ಸರೋವರದಲ್ಲಿ ವಿಹರಿಸಿದ್ದ. ನಾಯಕಿಯ ಸಮ್ಮುಖದಲ್ಲಿ ಅಪಘಾತಕ್ಕೀಡಾಗುತ್ತಿದ್ದ ಮಗುವೊಂದನ್ನು ತನ್ನ ಪ್ರಾಣವನ್ನು ಲೆಕ್ಕಿಸದೆ ರಕ್ಷಿಸಿದ್ದ. ಹಿಮಾಲಯನ್ ರ್‍ಯಾಲಿಯಲ್ಲಿ, ನ್ಯಾವಿಗೇಟರ್ ಆಗಿ ನಾಯಕಿಯೊಂದಿಗೆ, ಮೊದಲನೇ ಬಹುಮಾನ ಗೆದ್ದಿದ್ದ.

ಬಸ್ಸಿನ ಶಬ್ದವಾಯಿತು. ಡ್ರೈವರ್ ಯಾವ ಮಾಯಕದಲ್ಲೋ ಬಸ್ಸು ಹತ್ತಿ, ಇಂಜಿನ್ ಸ್ಟಾರ್ಟ್ ಮಾಡಿದ್ದ. ಕಂಡಕ್ಟರ್ ಬಸ್ಸಿನ ನಂಬರ್ ಅನ್ನು 39 ಎಂದು ಬದಲಾಯಿಸಿದ್ದ. ಬಸ್ಸಿನ ಶಬ್ದ ಕೇಳಿ ಉತ್ಸಾಹದಿಂದ, ಆತುರದಿಂದ ಬಸ್ಸಿನತ್ತ ನುಗ್ಗಿದ್ದರು. ಇಷ್ಟು ಹೊತ್ತು ಶಿಸ್ತಿನಿಂದ ಪಾಲಿಸಿದ್ದ ಕ್ಯೂ ಬಸ್ಸು ಬಂದೊಡನೆ ಚಲ್ಲಾ ಪಿಲ್ಲಿಯಾಗಿತ್ತು. ನಾಯಕಿ, ನಾಯಕ ಸೇರಿದಂತೆ ಪ್ರತಿಯೊಬ್ಬರೂ ಬಸ್ಸಿನಲ್ಲಿ ಜಾಗಗಿಟ್ಟಿಸುವ ಒಂದೇ ಗುರಿಯಿಂದ ಬಸ್ಸಿನತ್ತ ಧಾವಿಸಿದರು.

ಐದು ನಿಮಿಷಗಳಲ್ಲಿ ಬಸ್ಸು ತುಂಬಿ ತುಳುಕುತ್ತಿತ್ತು. ಅದರಲ್ಲಿ ಕ್ಯೂನಲ್ಲಿ ಹದಿನೇಳನೆಯವಳಾಗಿದ್ದ ಹುಡುಗಿಯೂ, ಐವತ್ತ ಮೂರನೆಯವನಾಗಿದ್ದ ಹುಡುಗನೂ ಒಂದೊಂದು ಮೂಲೆಯಲ್ಲಿ ಹ್ಯಾಂಡಲ್ ಬಾರ್ ಹಿಡಿದುಕೊಂಡು ನೇತಾಡುತ್ತಿದ್ದರು. ಅವರಿಬ್ಬರ ಮನಸ್ಸಿನಲ್ಲಿ ಪರಸ್ಪರ ವಿಚಾರಗಳು ಯಾವಾಗಲೋ ಹಾರಿ ಹೋಗಿದ್ದವು. ಹುಡುಗನಿಗೆ ಮೆಜೆಸ್ಟಿಕ್ಕಿನ ಗೆಳೆಯನ ನೆನಪು, ಮುಂದಿನ ತಿಂಗಳು ಬರಲಿದ್ದ ಪರೀಕ್ಷೆಯ ನೆನಪು, ಮೊದಲನೇ ವರ್ಷದ ಪದವಿ ತರಗತಿಯಲ್ಲಿ ಎರಡನೇ ವರ್ಷ ಓದುತ್ತಿರುವ ತನಗೆ ಅಪ್ಪ ಈ ಬಾರಿ ಪಾಸಾಗದಿದ್ದರೆ ಮನೆ ಬಿಟ್ಟು ಓಡಿಸುವುದಾಗಿ ಗದರಿಸಿದ್ದರ ನೆನಪು ಇತ್ಯಾದಿ ಇತ್ಯಾದಿಗಳು ತಲೆ ತಿನ್ನತೊಡಗಿದವು. ಹುಡುಗಿಗೋ ಮೊಟ್ಟ ಮೊದಲು ಚುರುಗುಡುತ್ತಿದ್ದ ಹೊಟ್ಟೆ ಕರೆಯುತ್ತಿತ್ತು. ಅದರ ಮೇಲೆ ಪರೀಕ್ಷೆ, ಈಗಿನ್ನೂ ಗಾಂಧಿ ಬಜಾರಿನ ಸೀರೆ ಅಂಗಡಿಗೆ ಬಂದಿದ್ದ ಹೊಸ ಮಾದರಿಯ ಸೀರೆ ಕೊಳ್ಳುವುದಕ್ಕೆ ದುಡ್ಡಿನ ಅಭಾವ, ಮನೆಯಲ್ಲಿ ಕೆಲಸ ಮಾಡದಿರುವ ಬಗ್ಗೆ ಅಮ್ಮನ ಕಿರಿಕಿರಿ ಇತ್ಯಾದಿ ಇತ್ಯಾದಿಗಳು ಮನಸ್ಸನ್ನು ಆಕ್ರಮಿಸಿದವು. ಕಂಡಕ್ಟರ್ ಟಿಂಗ್ ಟಿಂಗ್ ಎಂದು ಹೊರಡುವ ಸೂಚನೆ ಕೊಟ್ಟ. ಡ್ರೈವರ್ ಬಸ್ ಮುಂದೆ ನಡೆಸಿದಂತೆ, ಖಾಲಿಯಾಗಿದ್ದ ಬಸ್ ಸ್ಟಾಪಿನಲ್ಲಿ ಕಳೆದ ಸುಮಾರು ಅರ್ಧ ಮುಕ್ಕಾಲು ತಾಸಿನಲ್ಲಿ ಒಬ್ಬ ಹುಡುಗಿ - ಒಬ್ಬ ಹುಡುಗನ ಮನಸ್ಸಿನಲ್ಲಿ ನಡೆದ ಪ್ರೇಮ ನಾಟಕದ ಯಾವುದೇ ಸುಳಿವೂ ಉಳಿದಿರಲಿಲ್ಲ.

❀ ❀ ❀

## POHA IDLI WITH CHUTNEY

*- By Purnima Srikrishna*

**For the idli :**

1. 250 gms. - Poha
2. 50 gms. - Soogi (Semolina)
3. 2 table sps - Vermicelli
4. 1/2 Tea sps - Soda
5. Salt - to taste
6. 2 table sps - Ghee

**Method :**

1. Soak the poha in water for 1 hour and squeeze out the water (keep aside).
2. Crush the vermicilli to pieces and along with soogi fry in Ghee till brown.
3. Take off the fire, add salt, soda and wet poha.
4. Beat the curds and mix with the above ingridients.
5. Season it with mustard,red chillies and channa dal.
6. Add to the batter and mix well.
7. Grease idli plates and steam them.
8. Cool and remove.

CHUTNEY

1. 2 Sprigs curry leaves.
2. 1/2 tsp turmeric.
3. 4 table spoon bengal Gram (Channa Dal).
4. 2 tsp black gram.
5. 6 red chillies.
6. 1/4 tsp hing.
7. 1 small ball tamarind.
8. Salt to taste
9. 2 Table Spoon Oil

**Method :**

1. Wash curry leaves.
2. Heat Oil-Splutter black gram. bengal gram & chillies.
3. Add curry leaves - stir till they are almost black .
4. Grind to a paste adding tamarind,salt and a little water.
5. Serve with poha idlis.

## "ಶ್ರೀ ಭಗವದ್ಗೀತೆ"

ನಡೆ ಮುಂದೆ, ನಡೆ ಮುಂದೆ
ನುಗ್ಗಿ ನಡೆ ಮುಂದೆ,
ಜಗ್ಗದೆಯೆ ಕುಗ್ಗದೆಯೆ,
ಹಿಗ್ಗಿ ನಡೆ ಮುಂದೆ,
ಬೆಚ್ಚದೆಯೆ, ನೆಚ್ಚದೆಯೆ
ಕೆಚ್ಚೆದೆಯ, ಗುಡಿಯಲ್ಲಿ
ಆತ್ಮವಿರುವುದುನೆಂಬ ನರಿವನರಿತು,
ಮನವನ್ನು ಹಿಡಿಹಿಡಿದು,
ಇಂದ್ರಿಯವನು ಜಯಿಸಿ,
ಕರ್ಮ ಮಾರ್ಗವೇ ಶ್ರೇಷ್ಟವೆಂಬುವನು ಅರಿತು,
ಧ್ಯಾನವನು ಮಾಡುತ್ತ
ಜ್ಞಾನವನು ಅರಿಯುತ್ತ
"ಆತ್ಮನೇ ಬ್ರಹ್ಮನ್, ಬ್ರಹ್ಮನೇ ಆತ್ಮನ್"
ಎಂಬ ನರಿವನರಿತು
|| ನಡೆ ಮುಂದೆ, ನಡೆ ಮುಂದೆ ||

*- ರಮಾ ಎ. ಬಿಹಾರಿ*

## ಕಥಾ ಸಾಹಿತ್ಯ ಪರಂಪರೆ : ವಿಶೇಷೋಪನ್ಯಾಸ

ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ತಾ. 20-12-1990ರಿಂದ ಮೂರು ದಿನಗಳವರೆಗೆ 'ಕನ್ನಡ ಸಾಹಿತ್ಯದಲ್ಲಿ ಕಥಾ ಪರಂಪರೆ' ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಿತ್ತು. ಕನ್ನಡ ಕಥಾ ಪರಂಪರೆಯ ಬಗ್ಗೆ ಅದಿಕೃತವಾಗಿ ಮಾತಾಡಬಲ್ಲ ಡಾ| ವರದರಾಜ ಹುಯಿಲಗೋಳರು ಈ ಮೂರು ದಿನದ ಉಪನ್ಯಾಸ ಮಾಲಿಕೆಯಲ್ಲಿ ಕನ್ನಡದಲ್ಲಿ ಕಥೆ ಹರಿದು ಬಂದ ಜಾಡನ್ನು ಮೂರು ಘಟಗಳಲ್ಲಿ ಅಂದರೆ ಹಳೆಗನ್ನಡ, ನಡುಗನ್ನಡ ಮತ್ತು 19ನೇ ಶತಮಾನದ ಕಥಾ ಸಾಹಿತ್ಯವೆಂದು ಗುರುತಿಸುತ್ತಾ ತಮ್ಮ ಉಪನ್ಯಾಸವನ್ನು ಬಹಳ ಯಶಸ್ವಿಯಾಗಿ ನಡೆಸಿಕೊಟ್ಟರು.

ಡಾ|| ಹೇಮಂತ ಕುಲಕರ್ಣಿ ಮತ್ತು ಚಿದಂಬರ ದೀಕ್ಷಿತರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು.

## ನಾಟ್ಯ ಮಹೋತ್ಸವ

ಮೊಗವೀರ ಮಹಾಜನ ಸೇವಾ ಸಂಘ (ಬಗ್ವಾಡಿ ಹೋಬಳಿ - 1941)ದ ಸುವರ್ಣ ಮಹೋತ್ಸವದ ಅಂಗವಾಗಿ ಬೆಂಗಳೂರಿನ "ನಟರಂಗ" ಹಾಗೂ ಬೆನಕ ಮತ್ತು ಮುಂಬಯಿಯ "ತರಂಗ"ದ ಮುಖೇನ 5ದಿನಗಳ ನಾಟ್ಯ ಮಹೋತ್ಸವವನ್ನು ಕರ್ನಾಟಕ ಸಂಘದ ಝುವೇರ್ ಭ್ಯಾ ಪಟೇಲ್ ಸಭಾಗೃಹದಲ್ಲಿ (ಡಾ| ವಿಶ್ವೇಶ್ವರಯ್ಯ ಹಾಲ್, ಮಾಟುಂಗ) ತಾ. 2, 3, 8, 9 ಮತ್ತು 10 ಮಾರ್ಚ್ 1991ರಂದು ನೆರವೇರಿಸುವರು.

ವಿವರಗಳು :

1. ತಾ. 2-3-1991, ಸಂಜೆ 7ಕ್ಕೆ ಮಾಸ್ತಿಯವರ "ಕಾಕನ ಕೋಟೆ"

ನಿದೇಶನ : ಸಿ. ಆರ್. ಸಿಂಹ

2. ತಾ. 3-3-1991 ಮಧ್ಯಾಹ್ನ 4ಕ್ಕೆ ಗಿರೀಶ್ ಕಾರ್ನಾಡರ "ತಘಲಕ್"

ನಿರ್ದೇಶನ : ಸಿ. ಆರ್. ಸಿಂಹ

3. ತಾ. 8-3-1991, ಸಂಜೆ 7ಕ್ಕೆ ಪ್ರೊ| ಮಧುಕರ ತೋಡರ ಮಲ್ಲರ "ತರುಣ ದುರ್ದಂಡ ಮುದುಕಮಾರ್ತಾಂಡ"

ನಿದೇಶನ : ಸಂತೋಷ್ ಬಲ್ಲಾಳ್

4. ತಾ. 9-3-1991, ಸಂಜೆ 7ಕ್ಕೆ ಶ್ರೀ ಜಿ. ಬಿ. ಜೋಶಿಯವರ "ಸತ್ತವರ ನೆರಳು"

ನಿದೇಶನ : ಶ್ರೀ ಬಿ. ವಿ. ಕಾರಂತ್

5. ತಾ. 10-3-1991, ಮಧ್ಯಾಹ್ನ 4ಕ್ಕೆ ಶ್ರೀ ಕಂಬಾರರ "ಜೋಕುಮಾರ ಸ್ವಾಮಿ"

ನಿದೇಶನ : ಶ್ರೀ ಬಿ. ವಿ. ಕಾರಂತ್

ಟಿಕೇಟು ದರ : 5 ದಿನದ ಎಲ್ಲಾ ಪ್ರದರ್ಶನಕ್ಕೆ ರೂ. 250/-, ರೂ. 150/-, ರೂ. 100/-.

❀ ❀ ❀


FOR ALL YOUR DOMESTIC AND INTERNATIONAL TRAVEL ARRANGEMENTS
CONTACT
AUGUST TRAVEL SERVICE
Agents For
इंडियन एयरलाइन्स
Indian Airlines
वायुदूत
Vayudoot
REGD. OFFICE :
3/15 ASHIANA SECTOR - 17
VASHI - NEW BOMBAY
0215/682558-591
GRAMS : AUGTRASERV
ALSO AT :
2/16 KABBUR HOUSE
SION(E) BOMBAY 400 022.
4077750-2984/4093573

Regn. No. 040015/86
Regn. No. MH/BY/NE121/90



# ಪೊಳಲಿ ಶೀನಪ್ಪ ಹೆಗ್ಡೆ ಜನ್ಮ ಶತಾಬ್ದ ಆಚರಣೆ

ದಿನಾಂಕ 1-12-90 ದಿ. ಪೊಳಲಿ ಶೀನಪ್ಪ ಹೆಗ್ಗಡೆ ಜನ್ಮ ಶತಾಬ್ದ ಆಚರಣೆಯ ಅಂಗವಾಗಿ ಬೊಂಬೆ ಬಂಟ್ಸ್ ಎಸೋಸಿಯೇಷನ್ ಮತ್ತು ವಿಶ್ವವಿದ್ಯಾನಿಲಯ ಕನ್ನಡ ವಿಭಾಗ ಮುಂಬಯಿ ಇವರ ಸಂಯುಕ್ತ ಆಶ್ರಯದಲ್ಲಿ ವಿಚಾರ ಸಂಕಿರಣ ಮತ್ತು ಯಕ್ಷಗಾನ ತಾಳಮದ್ದಳೆ ಕಾರ್ಯಕ್ರಮಗಳು ವಿಜೃಂಭಣೆಯಿಂದ ನೆರವೇರಿದವು. ನಿತ್ಯಾನಂದ ಸಭಾಗೃಹ, ಮುಖ್ಯ ಅಧ್ಯಾಪಕ ಭವನ, ಸಯಾನ್ ಮುಂಬಯಿ - ಇಲ್ಲಿ ಸಂಜೆ 5-30ಕ್ಕೆ ಸಮಾವೇಶಗೊಂಡ ಈ ಸಮಾರಂಭದ ಅಧ್ಯಕ್ಷ ಸ್ಥಾನವನ್ನು ಮುಂಬಯಿ ವಿ.ವಿ. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ| ವಸಂತ ಕುಮಾರ ತಾಳ್ತಜೆಯವರು ವಹಿಸಿದ್ದರು.

ಉಪನ್ಯಾಸಕರಲ್ಲಿ ಒಬ್ಬರಾದ ಮೂಲ್ಕಿ ವಿಜಯಾ ಕಾಲೇಜಿನ ಪ್ರಾಧ್ಯಾಪಕ ಡಾ| ವಸಂತ ಮಾಧವರವರು ಜಿಲ್ಲೆಯ ಐತಿಹಾಸಿಕ ಆಧಾರಗಳಿಂದ ಬೇರೆ ಬೇರೆ ಜನಾಂಗಗಳ ಕುರಿತಾದ ಉಲ್ಲೇಖಗಳು, ಸಾಮಾಜಿಕ ಮತ್ತು ಸಾಂಸ್ಕೃತಿಕ ರೀತಿ ನೀತಿಗಳು ಬಳೆದು ಬಂದ ಬಗೆಯನ್ನು ದಾಖಲೆಗಳ ನಕಲನ್ನು ಸಾದರ ಪಡಿಸುವುದರ ಜೊತೆಗೆ ಮನಮಟ್ಟುವಂತೆ ಹೇಳಿದರು. ಇನ್ನೊಬ್ಬ ಉಪನ್ಯಾಸಕರಾದ ಶ್ರೀ ಎನ್. ಪಿ. ಶೆಟ್ಟಿ ಅವರು ಶೀನಪ್ಪ ಹೆಗ್ಗಡೆಯವರ ಜೀವನ ಮತ್ತು ಸಾಧನೆಗಳ ಬಗ್ಗೆ ವಿವರಿಸುತ್ತಾ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಕಾಸಕ್ಕಾಗಿ ದುಡಿದ ಹೆಗ್ಗಡೆಯವರು ದೇಶದ ಸ್ವಾತಂತ್ರ್ಯ ಸಮರದಲ್ಲಿ ಪಾಲ್ಗೊಂಡು ಜೈಲುವಾಸವನ್ನನುಭವಿಸಿದವರು, ನಿಸ್ವಾರ್ಥ ಭಾವದಿಂದ ದುಡಿದವರು, ನಾಡಿನ ಉದ್ದಗಲಕ್ಕೂ ಸಂಚರಿಸಿ ತುಳು ಸಂಸ್ಕೃತಿ ಮತ್ತು ಅಳಿಯಸಂತಾನ ಕಟ್ಟಿನ ಕುರಿತಾದ ಮಾಹಿತಿಯನ್ನು ಸಂಗ್ರಹಿಸಿ ನಾಡಿನ ಮೊದಲ ಸಂಶೋಧಕರೆಂದು ಮನ್ನಣೆ ಪಡೆದವರು. ಆಧುನಿಕ ತುಳುಭಾಷೆಯ ನಿರ್ಮಾತೃಗಳಲ್ಲಿ ಪ್ರಮುಖರೆಂದು ನುಡಿದರು. ಮುಂಬಯಿ ವಿಶ್ವವಿದ್ಯಾಲಯದ ಸಂಶೋಧಕ ವಿದ್ಯಾರ್ಥಿ ಶ್ರೀ ಎ. ಸುಬ್ಬಣ್ಣ ರೈ ಅವರು "ಉಪಲಬ್ದ ಜಾನಪದ ಆಕರಗಳು ಮತ್ತು ಶೀನಪ್ಪ ಹೆಗ್ಗಡೆಯವರ ಸಮಕಾಲೀನ ಮತ್ತು ನಂತರದ ಇತಿಹಾಸಕಾರರ" ಬಗೆಗೆ ಉಪಯುಕ್ತ ಪ್ರಬಂಧವನ್ನು ಮಂಡಿಸಿದರು. ತುಳುನಾಡಿನ ಜಾನಪದ ಕಥೆಗಳಲ್ಲಿ ಹೊರಹೊಮ್ಮುವ ಆಯಾಕಾಲದ ಸಾಮಾಜಿಕ ಸ್ಥಿತಿ-ಗತಿಗಳ ಬಗೆಗೆ ವಿಶ್ಲೇಷಿಸುತ್ತಾ, ಶೀನಪ್ಪ ಹೆಗ್ಗಡೆಯವರಿಂದ ಚಾಲನೆಗೊಂಡ ಸಂಶೋಧನೆಯ ಕೆಲಸ, ಎನ್. ಎಸ್. ಕಿಲ್ಲೆ, ಗಣಪತಿರಾವ್ ಐಗಳ್ ಎ. ಬಿ. ಸಾಲೆತ್ತೂರ್, ಡಾ| ಗುರುರಾಜ ಭಟ್ ಮುಂತಾದವರು ಮುಂದೆ ಇನ್ನಷ್ಟು ವಿವರವಾದ ಮತ್ತು ಆಳವಾದ ಅಧ್ಯಯನಗಳನ್ನು ಈ ನಿಟ್ಟಿನಲ್ಲಿ ಮಾಡಿ ಸತ್ಯ ಶೋಧನೆಗೆ ಸಹಾಯಕರಾಗಿದ್ದರೆಂದೂ, ನಮ್ಮ ಜೊತೆಗೆ ಉಪಸ್ಥಿತರಿರುವ ಡಾ| ವಸಂತ ಮಾಧವರೂ ಇಂತಹ ಒಬ್ಬ ವಿದ್ವಾಂಸರೆಂದೂ ನುಡಿದರು.

ಡಾ| ವಸಂತ ಕುಮಾರ ತಾಳ್ತಜೆಯವರು ತನ್ನ ಅಧ್ಯಕ್ಷೀಯ ಭಾಷಣದಲ್ಲಿ ಅಂದಿನ ಉಪನ್ಯಾಸಕಾರರ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿ ಮುಂಬಯಿಯ ಅನೇಕ ಕನ್ನಡ ಸಂಸ್ಥೆಗಳು ಕನ್ನಡ ಸಾಹಿತ್ಯ ಸಂಸ್ಕೃತಿಗೆ ಉಪಯುಕ್ತ ಸೇವೆ ಸಲ್ಲಿಸುತ್ತಿವೆಯೆಂದು ಮುಕ್ತ ಕಂಠದಿಂದ ಪ್ರಶಂಸಿದರು. ಮನೋರಂಜನೆಯ ಅಂಗವಾಗಿ ಬಿ. ಯಸ್. ಕುರ್ಕಾಲರು ತಾವೇ ಬರೆದ 'ಕಾಲದ ಕುದುರೆ' ಎಂಬ ಸಮೂಹ ಗೀತೆಯನ್ನು ವಿದ್ಯಾರ್ಥಿಗಳ ಜೊತೆಗೆ ಸುಶ್ರಾವ್ಯವಾಗಿ ಹಾಡಿದರು. 'ಕೃಷ್ಣಸಂದಾನ' ಎಂಬ ಯಕ್ಷಗಾನ ತಾಳಮದ್ದಲೆ ಶ್ರೀ ಪೊಲ್ಯ ಲಕ್ಷ್ಮೀನಾರಾಯಣ ಶೆಟ್ಟಿಯವರ ಭಾಗವತಿಕೆಯಲ್ಲಿ, ಅಡ್ಡೆ ವಾಸು ಶೆಟ್ಟಿ, ಚಂದ್ರಶೇಖರ ನಾಯಕ್, ಬ್ರಹ್ಮಾವರ ರಘುರಾಮ ಶೆಟ್ಟಿ ಮುಂತಾದ ಕಲಾವಿದರು ನಡೆಸಿಕೊಟ್ಟರು.

---

## "ರಂಗಧ್ವನಿ" ಕೃತಿ ಬಿಡುಗಡೆ

'ಧ್ವನಿ' ಬಳಗದ ಐದನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರಕಾಶ್ ರಾವ್ ಪಯ್ಯಾರು ಅವರು ಸಂಪಾದಿಸಿದ ರಂಗಭೂಮಿಯ ವಿಮರ್ಶಾ ಬರಹಗಳ ಸಂಕಲನ "ರಂಗಧ್ವನಿ" ಕೃತಿಯನ್ನು ಪ್ರೊ| ರಂಗನಾಥ್ ಬಾರದ್ವಾಜ್ ಅವರು ಬಿಡುಗಡೆಗೊಳಿಸಿದರು,

ಸಮಾರಂಭದ ಅಧ್ಯಕ್ಷತೆ ವಹಿಸಿದ ಅವರು ಮಾತನಾಡುತ್ತ "ಕನ್ನಡದ ಖ್ಯಾತ ವಿಮರ್ಶಕರು, ರಂಗತಜ್ಞರುಗಳ ಬರಹಗಳನ್ನೊಳಗೊಂಡಿರುವ ಈ "ರಂಗಧ್ವನಿ" ಕೃತಿ - ರಂಗ ಭೂಮಿಯ ಬಗ್ಗೆ ಅಭ್ಯಸಿಸುವವರಿಗೆ ತುಂಬಾ ಪ್ರಯೋಜನಕಾರಿಯಾಗಿದೆ; ಇಂತಹ ಒಂದು ಸಮಗ್ರ ಕೃತಿಯನ್ನು ಹೊರನಾಡಿನಲ್ಲಿದ್ದುಕೊಂಡು 'ಧ್ವನಿ' ಬಳಗದ ಗೆಳೆಯರು ಪ್ರಕಟಿಸುತ್ತಿರುವುದು ಶ್ಲಾಘನೀಯ ಸಂಗತಿ" ಎಂದು ಹೇಳಿದರು.

***

## ಕನ್ನಡ ಸಂಘ, ಕೆ. ಜೆ. ಸೋಮಯ್ಯ ಕಾಲೇಜು

ವಿದ್ಯಾವಿಹಾರದ ಸೋಮಯ್ಯ ಕಾಲೇಜುಗಳ ಅಂತರ್‌ಕಾಲೇಜು ಪ್ರತಿಭಾ ಸ್ಪರ್ಧೆ ಕಾಲೇಜಿನ ಮಂದಿರದಲ್ಲಿ ಇತ್ತೀಚೆಗೆ ನಡೆಯಿತು.

ಜ್ಞಾನಾಭಿವೃತ್ತಿಗೆ ಶಿಕ್ಷಣಬೇಕು, ಆದರೆ ವ್ಯಕ್ತಿತ್ವ ವಿಕಸನಕ್ಕೆ ಸಾಹಿತ್ಯಿಕ ಸಂಸ್ಕೃತಿಕ ತಿಳಿವಳಿಕೆ ಪಾಲ್ಗೊಳ್ಳುವಿಕೆಯೂ ಅಷ್ಟೇ ಗಮನೀಯವಾಗಿದೆ. ವಸ್ತು-ನಿಷ್ಠ ಜೀವನದ ಮಾಯಾಬಲೆಯಿಂದ ದೂರವಿದ್ದು ಮಾನವಿಯ ಮೌಲ್ಯಾಭರಿತ ಜೀವನವನ್ನಾಗಿಸುವ ಅಗತ್ಯದ ಅರಿವು ಪ್ರತಿಯೋರ್ವನಲ್ಲೂ ಮೂಡಿ ಚೈತನ್ಯದಾಯಕವಾಗಬೇಕಾಗಿದೆ ಎಂದು ಡಾ|| ಸಂಜೀವ ಶೆಟ್ಟಿ ಅವರು ಅಧ್ಯಕ್ಷ ಸ್ಥಾನದಿಂದ ಕರೆನೀಡಿದರು.

ಈ ಸ್ಪರ್ಧೆಗಳಲ್ಲಿ, ವರಕವಿ ಬೇಂದ್ರೆ ಪರ್ಯಾಯ ಫಲಕ ಮತ್ತು ಗುಣಪಾಲ ಶೆಟ್ಟಿ ಪರ್ಯಾಯ ಫಲಕವನ್ನು ಕೆ.ಬಿ.ಎಸ್. ಕಾಲೇಜಿನವರು ಗೆದ್ದರು.

## ಮದರ್ ಇಂಡಿಯಾದಲ್ಲಿ ಅಂತರ್ಶಾಲಾ ಪ್ರತಿಭಾ ಸ್ಪರ್ಧೆ

ಮದರ್ ಇಂಡಿಯಾ ಧರ್ಮಾರ್ಥ ರಾತ್ರಿ ಶಾಲೆಯಲ್ಲಿ ಸುವರ್ಣ ಮಹೋತ್ಸವದ ನಿಮಿತ್ತ ಅಂತರ್ಶಾಲಾ ಪ್ರತಿಭಾ ಸ್ಪರ್ಧೆಯು ಶ್ರೀ ಸುರೇಶ ಎಸ್. ಸುವರ್ಣರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರಗಿತು. ಸ್ಪರ್ಧೆಯ ತೀರ್ಪುಗಾರರಾಗಿ ಶ್ರೀಮತಿ ಜಮುನ್ ಉಚ್ಚಿಲ್, ಶ್ರೀಮತಿ ಶ್ಯಾಮಲಾ ಮಾಧವ ಮತ್ತು ಕು. ನಡೂರ ಸುಮತಿ ಆಗಮಿಸಿದ್ದರು.

ಕನ್ನಡ ಭಾಷಣ, ಹಿಂದಿ ಭಾಷಣ, ಭಾವಗೀತೆ, ಸಮೂಹ ಗಾನ ಹಾಗೂ ಕನ್ನಡ ನಿಬಂಧ ಸ್ಪರ್ಧೆಗಳು ನಡೆದವು.

ಮೇಲಿನ ಎಲ್ಲಾ ಸ್ಪರ್ಧೆಗಳಲ್ಲಿ ಅಧಿಕ ಗುಣಗಳನ್ನು ಪಡೆದು ಬಹುಮುಖ ಪ್ರತಿಭೆಗೆ ಅರ್ಹರಾದ ವಿ.ವಿ.ಎಂ. ಶಾಲೆಯು ಮದರ್ ಇಂಡಿಯಾ ಧರ್ಮಾರ್ಥ ರಾತ್ರಿ ಶಾಲಾ ಹಳೆ ವಿದ್ಯಾರ್ಥಿ ಸಂಘದ "ನಟರಾಜ ಪರ್ಯಾಯ ಫಲಕ"ವನ್ನು ಗೆದ್ದುಕೊಂಡಿತು.

***

## ಮುಂಬಯಿ ವಿ. ವಿ. ಕನ್ನಡ ವಿಭಾಗದಲ್ಲಿ ಪುರಸ್ಕೃತ ಕೃತಿಗಳ ವಿಚಾರ ಗೋಷ್ಠಿ

ಇತ್ತೀಚೆಗೆ ಮುಂಬಯಿ ವಿ.ವಿ. ಕನ್ನಡ ವಿಭಾಗವು 1990ರ ವಿಶೇಷ ಪುರಸ್ಕಾರ ಗಳಿಸಿದ ಕೃತಿಗಳ ಬಗ್ಗೆ ಒಂದು ವಿಚಾರ ಗೋಷ್ಠಿಯನ್ನು ಏರ್ಪಡಿಸಿತ್ತು. ಶ್ರೀಯುತ ಸನದಿಯವರು ಅಧ್ಯಕ್ಷತೆ ವಹಿಸಿದ್ದರು. ಈ ವರ್ಷದ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಕಾದಂಬರಿ ದೇವನೂರ ಮಹಾದೇವರ 'ಕುಸುಮ ಬಾಲೆ'ಯ ಬಗೆಗೆ ಶ್ರೀ ವರದರಾಜ ಚಂದ್ರಗಿರಿಯವರು ತಮ್ಮ ವಿಮರ್ಶಾ ಪ್ರಬಂಧವನ್ನು ಪ್ರಸ್ತುತ ಪಡಿಸಿದರು. ಮಹಾರಾಷ್ಟ್ರ ಸರ್ಕಾರದ ಪುರಸ್ಕೃತ ಕೃತಿಗಳಾದ ಯಶವಂತ ಚಿತ್ತಲಾರ 'ಕಥೆಯಾದಳು ಹುಡುಗಿ'ಯ ಬಗ್ಗೆ ಶ್ರೀ ರಘುನಾಥರವರೂ ಬಲ್ಲಾಳರ 'ಬಂಡಾಯ'ದ ವಿಷಯವಾಗಿ ಕು| ಗೀತಾ ಕುಲಕರ್ಣಿಯವರೂ ತಮ್ಮ ಪ್ರಬಂಧಗಳನ್ನು ಮಂಡಿಸಿದರು. ಅಧ್ಯಕ್ಷರು ಅರ್ಥಪೂರ್ಣ ಸಮಾರೋಪ ಭಾಷಣವನ್ನು ಮಾಡಿದರು. ಶ್ರೀಮತಿ ಗಿರಿಜಾ ಶಾಸ್ತ್ರಿಯವರು ಕಾರ್ಯಕ್ರಮವನ್ನು ನಿರ್ವಹಿಸಿದರೆ, ಕೊನೆಯಲ್ಲಿ ಕು| ಸರಸ್ವತಿಯವರು ಧನ್ಯವಾದಗಳನ್ನು ಸಮರ್ಪಿಸಿದರು.

- ಎ. ಸುಬ್ಬಣ್ಣ ರೈ
(ವಿಭಾಗದ ಪರವಾಗಿ)

Edited, Printed & Published by M. A. N. Prasad on behalf of The Mysore Association, Bombay
Laser Typeset and Printed at Aarati Art Printers, Fort, Bombay-400 001. Phone : 286 33 61